# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಮೇ 07, 2022

ಸಂಪುಟ : 48 ಸಂಚಿಕೆ : 356 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಕಾಳಸಂತೆಯಲ್ಲಿ ಪಡಿತರ: ಕಟ್ಟುನಿಟ್ಟಿನ ಕ್ರಮಕ್ಕೆ ಸೂಚನೆ

### ಕೆಡಿಪಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ದಾವಣಗೆರೆ, ಮೇ 6- ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಅವರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗೆ ಸೂಚಿಸಿದರು.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಹತ್ತು ತಿಂಗಳ ನಂತರ ನಡೆದ 2021-22ನೇ ಸಾಲಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ನಾಲ್ಕನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಪಡಿತರ ಅಕ್ರಮ ಮಾರಾಟಕ್ಕೆ ಕುಮ್ಮಕ್ಕು ನೀಡುವ ನ್ಯಾಯ ಬೆಲೆ ಅಂಗಡಿಗಳ ಮೇಲೂ ಕ್ರಮ ಕೈಗೊಳ್ಳುವಂತೆ ಹೇಳಿದರು.

ಕಾಳಸಂತೆಯಲ್ಲಿ ಅಕ್ಕಿ ಮಾರುವವರು ಯಾರೇ ಆಗಿರಲಿ, ಯಾವ ಒತ್ತಡಕ್ಕೂ ಮಣಿಯದೇ ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಅಕ್ಕಿ ಮಾರಾಟದ ಬಗ್ಗೆ ದೂರುಗಳು ಬಂದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದಕ್ಕೂ ಮುನ್ನ ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಹಾಗೂ ಹರಿಹರ ಶಾಸಕ ಎಸ್. ರಾಮಪ್ಪ ಅವರು ಲೋಡ್ ಗಟ್ಟಲೆ ಪಡಿತರ ಅಕ್ಕಿ ಅಕ್ರಮವಾಗಿ ಸರಬರಾಜಾಗುತ್ತಿದ್ದರೂ ಅಧಿಕಾರಿಗಳು ಕ್ರಮ ಕೈಗೊಳ್ಳಲು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಎಸ್.ರಾಮಪ್ಪ ಮಾತನಾಡಿ, ಚಿಕ್ಕ ಪುಟ್ಟ ಮಾರಾಟಗಾರರ ಮೇಲೆ ಕ್ರಮ ಕೈಗೊಳ್ಳುವುದಷ್ಟೇ ಅಲ್ಲ. ರೈಸ್ ಮಿಲ್‌ಗಳಲ್ಲಿ ಅಕ್ಕಿ ದಾಸ್ತಾನು ಇಟ್ಟಂತೆ, ಪಡಿತರ ಅಕ್ಕಿಯನ್ನೂ ದಾಸ್ತಾನು ಇಟ್ಟುಕೊಂಡಿರುತ್ತಾರೆ. ಅಂತಹ ಸ್ಥಳಗಳ (2ನೇ ಪುಟಕ್ಕೆ)

### ಹೆಡ್ ನರ್ಸ್ ಧಿಮಾಕು ಮಾಡ್ತಾರೆ ಬದಲಿಸಿ : ಶಾಸಕ ರಾಮಪ್ಪ

ಹರಿಹರ ಆಸ್ಪತ್ರೆಯಲ್ಲಿ ಹೆಡ್ ನರ್ಸ್ ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ. ಆಸ್ಪತ್ರೆ-ಮನೆ ಎರಡನ್ನೂ ಒಂದೇ ಮಾಡಿಕೊಂಡಿದ್ದಾರೆ. ಅವರನ್ನು ಬದಲಿಸುವಂತೆ ಹೇಳಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ಶಾಸಕ ಎಸ್. ರಾಮಪ್ಪ ಅಸಮಾಧಾನ ಹೊರ ಹಾಕಿದರು.
ಶಾಸಕ ಪ್ರೊ.ಲಿಂಗಣ್ಣ, ಹೂವಿನಮಡು ಗ್ರಾಮದಲ್ಲಿ ಡಿ ಗ್ರೂಪ್ ನೌಕರರೇ ಇಂಜಕ್ಷನ್ ಮಾಡುತ್ತಾರೆ. ಹಳ್ಳಿಗಳಲ್ಲಿ ವೈದ್ಯರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೆಲ ಆಸ್ಪತ್ರೆಗಳಲ್ಲಿ ನರ್ಸ್‌ಗಳಿಲ್ಲ. ನರ್ಸ್‌ಗಳನ್ನು ನೇಮಿಸಿ ಎಂದರು. ಆರೋಗ್ಯ ಇಲಾಖೆಗೆ ನೀಡಿದ 2 ಆಂಬ್ಯುಲೆನ್ಸ್‌ಗಳು ಚಾಲಕರಿಲ್ಲದೆ ಕಾರ್ಯನಿರ್ವಹಿಸದೆ ನಿಂತಿವೆ. ಶೀಘ್ರದಲ್ಲಿಯೇ ಚಾಲಕರನ್ನು ನೇಮಿಸಿ ಎಂದರು.

## ಸಮಾಜವನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನ



ವೀರಶೈವ ಲಿಂಗಾಯತರೆಲ್ಲಾ ಒಂದಾದರೆ ಮಾತ್ರ ಶಕ್ತಿ ಪ್ರದರ್ಶನ ಮಾಡಲು ಸಾಧ್ಯ

ದಾವಣಗೆರೆ, ಮೇ 6- ವೀರಶೈವ ಲಿಂಗಾಯತರೆಲ್ಲಾ ಒಂದಾದರೆ ಮಾತ್ರ ಶಕ್ತಿ ಪ್ರದರ್ಶನ ಮಾಡಲು ಸಾಧ್ಯವಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ತಮ್ಮ ಇಂಗಿತ ವ್ಯಕ್ತಪಡಿಸಿದರು.

ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಏರ್ಪಡಿಸಿದ್ದ ಬಸವೇಶ್ವರ ಜಯಂತ್ಯುತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ವೀರಶೈವ ಸಮಾಜ 99 ಒಳಪಂಗಡಗಳಾಗಿದ್ದು, ಒಗ್ಗೂಡಿಸುವ (5ನೇ ಪುಟಕ್ಕೆ)

## ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕಲಿಸದಿದ್ದರೆ ವೃದ್ಧಾಶ್ರಮಕ್ಕೆ ಹೋಗಬೇಕಾದೀತು

### ವಡ್ಡನಹಾಳು ಕಾಶೀಮಠದ ಶ್ರೀ ಅಷ್ಟೋತ್ತರ ಸತ ಶ್ರೀ ಶಂಕರಾತ್ಮಾನಂದ ಸರಸ್ವತೀ ಸ್ವಾಮೀಜಿ ಮುನ್ನೆಚ್ಚರಿಕೆ

ಮಲೇಬೆನ್ನೂರು, ಮೇ 6 - ವಿಶ್ವಕರ್ಮ ಸಮಾಜದವರು ವೈದಿಕ ಪರಂಪರೆಗೆ ಒತ್ತು ಕೊಟ್ಟು, ಮಕ್ಕಳಿಗೂ ವೈದಿಕ ಪರಂಪರೆ ಬಗ್ಗೆ ತಿಳಿಸಬೇಕೆಂದು ವಡ್ಡನಹಾಳು ಕಾಶೀಮಠದ ಶ್ರೀ ಅಷ್ಟೋತ್ತರ ಸತ ಶ್ರೀ ಶಂಕರಾತ್ಮಾನಂದ ಸರಸ್ವತೀ ಸ್ವಾಮೀಜಿ ಹೇಳಿದರು.

ಪಟ್ಟಣದ ಪಟೇಲ್ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿಯ 26ನೇ ವರ್ಷದ ಪ್ರಾಣ ಪ್ರತಿಷ್ಠಾಪನಾ ವಾರ್ಷಿಕೋತ್ಸವದ ಅಂಗವಾಗಿ ಇಂದು ಹಮ್ಮಿಕೊಂಡಿದ್ದ ವಟುಗಳಿಗೆ ಸಾಮೂಹಿಕ ಉಪನಯನ, ಜವಳ ಮತ್ತು ಸಾಮೂಹಿಕ ವಿವಾಹ (2ನೇ ಪುಟಕ್ಕೆ)






## ಪ್ಲಾಸ್ಟಿಕ್ ಹಾಳೆಗಳಿಂದ ಹೊಲಗಳಲ್ಲಿ ಮಾಲಿನ್ಯ : ವರದಿ



ನವದೆಹಲಿ, ಮೇ 6 – ತಾಪಮಾನ ಹಾಗೂ ತೇವಾಂಶ ಉಳಿಸಿಕೊಳ್ಳಲು ಹೊಲದ ನೆಲದ ಮೇಲೆ ಹರಡುವ ಪ್ಲಾಸ್ಟಿಕ್ ಕಾರಣದಿಂದ ಮಣ್ಣಿನಲ್ಲಿ ಸೂಕ್ಷ್ಮ ಪ್ಲಾಸ್ಟಿಕ್ ಮಾಲಿನ್ಯ ಹರಡುತ್ತಿದೆ ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ.

5 ಮಿ.ಮೀ ಡಯಾಮೀಟರ್‌ಗಿಂತ ಕಡಿಮೆ ಗಾತ್ರದ ಪ್ಲಾಸ್ಟಿಕ್ ಅನ್ನು ಮೈಕ್ರೋಪ್ಲಾಸ್ಟಿಕ್ ಎಂದು ಪರಿಗಣಿಸಲಾಗುತ್ತದೆ. ಇದು ಪರಿಸರ ಮಾಲಿನ್ಯಕ್ಕೆ ಪ್ರಮುಖ ಕಾರಣವಾಗಿದೆ.

ಸರ್ಕಾರೇತರ ಸಂಸ್ಥೆಯಾದ ಟಾಕ್ಸಿಕ್ಸ್ ಲಿಂಕ್ ಸಂಸ್ಥೆಯು ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿನ ಕೃಷಿ ಭೂಮಿಗಳಿಂದ ಮಣ್ಣಿನ ಮಾದರಿ ಪಡೆದು ವರದಿ ರೂಪಿಸಿದೆ. ಈ ವರದಿಯ ಪ್ರಕಾರ, ಮಣ್ಣಿನ ಹಲವಾರು ಪದರಗಳಲ್ಲಿ (2ನೇ ಪುಟಕ್ಕೆ)







## ದಾವಿವಿ ಕುಲಸಚಿವರಾಗಿ ಸರೋಜಾ ಅಧಿಕಾರ ಸ್ವೀಕಾರ



ದಾವಣಗೆರೆ, ಮೇ 6- ದಾವಣಗೆರೆ ವಿಶ್ವವಿದ್ಯಾನಿಲಯದ ನೂತನ ಕುಲಸಚಿವರಾಗಿ ಬಿ.ಬಿ. ಸರೋಜಾ ಅವರು ಶುಕ್ರವಾರ ಅಧಿಕಾರ ಸ್ವೀಕರಿಸಿದರು. ಹಿರಿಯೂರಿನಲ್ಲಿ ಭೂಸ್ವಾಧೀನಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸರೋಜಾ ಅವರು ಅಲ್ಲಿಂದ ಬಿಡುಗಡೆಯಾಗಿ, ಸಂಜೆ ಅಧಿಕಾರ ಸ್ವೀಕರಿಸಿದರು. ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ ಅವರು ಸರೋಜಾ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಈ (5ನೇ ಪುಟಕ್ಕೆ)

### ಸುರೇಶ್ ಗಂಡಗಾಳೆ ಅವರಿಗೆ ಪಿತೃ ವಿಯೋಗ



ದಾವಣಗೆರೆ ಜಾಲಿನಗರದ ಶ್ರೀ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನದ ಹತ್ತಿರದ ವಾಸಿ

**ಶ್ರೀ ರಾಜಾರಾವ್ ಗಂಡಗಾಳೆ**

ಅವರು ದಿನಾಂಕ 06.5.2022ರ ಶುಕ್ರವಾರ ರಾತ್ರಿ 8 ಗಂಟೆಗೆ ನಿಧರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಓರ್ವ ಪುತ್ರಿ, ಅಳಿಯ ಹಾಗು ಸೂರ್ಯವಂಶ ಕ್ಷತ್ರಿಯ ಕಾಟಿಕ್ ಸಮಾಜದ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 07.5.2022 ನೇ ಶನಿವಾರ ಬೆಳಿಗ್ಗೆ 11.30ಕ್ಕೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಪುತ್ರ: ಶ್ರೀ ಸುರೇಶ್ ಗಂಡಗಾಳೆ, ಬಿಜೆಪಿ ಮುಖಂಡರು
ಸೊಸೆ: ಶ್ರೀಮತಿ ರೇಖಾ ಸುರೇಶ್ ಗಂಡಗಾಳೆ
ಮಹಾನಗರ ಪಾಲಿಕೆ ಸದಸ್ಯರು, ದಾವಣಗೆರೆ.




## ಸಾಗರಮಾಲಾ : 6.5 ಲಕ್ಷ ಕೋಟಿ ರೂ.ಗಳ 1,500 ಯೋಜನೆ

ನವದೆಹಲಿ, ಮೇ 6 – ಬಂದರು ಆಧರಿತ ಅಭಿವೃದ್ಧಿ ಯೋಜನೆಯಾದ ಸಾಗರಮಾಲಾ ಅಂಗವಾಗಿ ಕೈಗೊಳ್ಳಲಾಗುವ 1,500 ಯೋಜನೆಗಳನ್ನು ಗುರುತಿಸಲಾಗಿದ್ದು, ಇವುಗಳ ಮೊತ್ತ 6.5 ಲಕ್ಷ ಕೋಟಿ ರೂ. ಆಗಲಿದೆ ಎಂದು ಕೇಂದ್ರ ಸಚಿವ ಸರ್ಬಾನಂದ ಸೊನಾವಲ್ ಹೇಳಿದ್ದಾರೆ.

ಕರಾವಳಿ ಜಿಲ್ಲೆಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ 567 ಯೋಜನೆಗಳನ್ನು ಗುರುತಿಸಲಾಗಿದೆ. ಇವುಗಳ ಮೊತ್ತ 58,700 ಕೋಟಿ ರೂ. ಆಗಲಿದೆ ಎಂದವರು ತಿಳಿಸಿದ್ದಾರೆ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಕೇಂದ್ರ ಬಂದರು ಹಾಗೂ ಜಲಸಾರಿಗೆ ಸಚಿವ ಸೊನಾವಲ್, ದೇಶದ 7,500 ಕಿ.ಮೀ. ಉದ್ದದ ಕರಾವಳಿ ತೀರ ಮಾರ್ಗ ಹಾಗೂ 14,500 ಕಿ.ಮೀ.ಗಳ ಜಲ ಮಾರ್ಗ ಬಳಸಿ ಅಭಿವೃದ್ಧಿಗೆ ಯೋಜಿಸಲಾಗಿದೆ ಎಂದಿದ್ದಾರೆ.

2035ರ ವೇಳೆಗೆ 5.5 ಲಕ್ಷ ಕೋಟಿ ರೂ. ವೆಚ್ಚದ 802 ಯೋಜನೆಗಳು ಪೂರ್ಣಗೊಳ್ಳಲಿವೆ. 99,281 ಕೋಟಿ ರೂ.ಗಳ 202 ಯೋಜನೆಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಖಾಸಗಿ ಸಹಭಾಗಿತ್ವದಲ್ಲಿ 45 ಸಾವಿರ ಕೋಟಿ ರೂ.ಗಳ 29 ಯೋಜನೆಗಳನ್ನೂ ಪೂರ್ಣಗೊಳಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. 51 ಸಾವಿರ ಕೋಟಿ ರೂ.ಗಳ ಇನ್ನೂ 32 ಯೋಜನೆಗಳನ್ನು ಪೂರ್ಣಗೊಳಿಸಲಾಗುತ್ತಿದೆ ಎಂದವರು ತಿಳಿಸಿದ್ದಾರೆ. 2.12 ಲಕ್ಷ ಕೋಟಿ ರೂ.ಗಳ 200ಕ್ಕೂ ಹೆಚ್ಚು ಯೋಜನೆಗಳು ಎರಡು ವರ್ಷಗಳಲ್ಲಿ ಪೂರ್ಣಗೊಳ್ಳಲಿವೆ ಎಂದವರು ತಿಳಿಸಿದ್ದಾರೆ.

# ಭೂ ಸುಧಾರಣೆ ಕಾನೂನಿಗಾಗಿ ನಾಡಿದ್ದು ರಾಜ್ಯ ಮಟ್ಟದ ಸಮ್ಮೇಳನ

ಹರಪನಹಳ್ಳಿ, ಮೇ 6 - ಉಳುವವನೇ ಭೂಮಿಯ ಒಡೆಯ ಎಂಬ ಘೋಷಣೆ ಅಡಿ ಭೂ ಸುಧಾರಣೆ ಕಾನೂನಿಗಾಗಿ, ಬಗರ್ ಹುಕ್ಕುಂ ಸಾಗುವಳಿ ಭೂಮಿ ಸಕ್ರಮ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಹೋರಾಟ ರೂಪಿಸಲು ಅಖಿಲ ಭಾರತ ಕಿಸಾನ್ ಸಭಾ ಇದೇ ದಿನಾಂಕ 9 ಮತ್ತು 10ರಂದು ಕಲ್ಬುರ್ಗಿಯಲ್ಲಿ ರಾಜ್ಯ ಮಟ್ಟದ ಸಮ್ಮೇಳನವನ್ನು ಆಯೋಜಿಸಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ರಾಜ್ಯ ಕಾರ್ಯದರ್ಶಿ ಡಾ. ಕೆ.ಎಸ್. ಜನಾರ್ಧನ ತಿಳಿಸಿದರು.




ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ದಿನಮಾನಗಳಲ್ಲಿ ದೇಶ ಮತ್ತು ರಾಜ್ಯದಲ್ಲಿ ರೈತರ ಸಮಸ್ಯೆಗಳು ಹೆಚ್ಚಾಗುತ್ತಿವೆ. ದೇಶದ ನೂರಾರು ರೈತ ಸಂಘಟನೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ಕಾನೂನು ನೀತಿಗಳ ವಿರುದ್ಧ ದೇಶದ್ಯಾದ್ಯಂತ ಚಳುವಳಿ ತೀವ್ರಗೊಂಡಿದ್ದು, ರೈತರು ಎಚ್ಚೆತ್ತುಕೊಂಡು ಒಗ್ಗಟ್ಟಿನಿಂದ ಹೋರಾಟವನ್ನು ಮುಂದುವರೆಸುವ ಅನಿವಾರ್ಯತೆ ಇದೆ ಎಂದರು.

ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯಿಂದ ತಾಲ್ಲೂಕಿನಲ್ಲಿ ಸಮಗ್ರ ನೀರಾವರಿ ಕುಂಠಿತ ಗೊಂಡಿದೆ. ಆದ್ದರಿಂದ ಹರಪನಹಳ್ಳಿ ತಾಲ್ಲೂಕು ಒಳಗೊಂಡಂತೆ ಬರಪೀಡಿತ ಪ್ರದೇಶಗಳಿಗೆ ತುಂಗಭದ್ರಾ ನದಿ ನೀರನ್ನು ಕಲ್ಪಿಸುವ ಮೂಲಕ ನೀರಾವರಿಗೆ ಆದ್ಯತೆ ನೀಡಬೇಕು. ರೈತರು ಕಷ್ಟಪಟ್ಟು ಬೆಳೆದ ಬೆಳೆಯ ಫಲಕ್ಕೆ ಸರಿಯಾದ ಸಮಯಕ್ಕೆ ವೈಜ್ಞಾನಿಕ ಬೆಲೆಯೊಂದಿಗೆ ಖರೀದಿ ಕೇಂದ್ರಗಳನ್ನು ತೆರೆಯಬೇಕು. ರಾಜ್ಯದ ಕೆಲವು ಕಡೆಗಳಲ್ಲಿ ಕಾಡು ಪ್ರಾಣಿಗಳಿಗೆ ಸರಿಯಾದ ಆಹಾರ, ನೀರು ಇಲ್ಲದೆ ರೈತರ ಬೆಳೆ ಹಾಗೂ ಧಾನ್ಯಗಳನ್ನು ನಾಶಗೊಳಿಸುತ್ತಿವೆ. ರೈತರು ಬೆಳೆ ವಿಮೆ ತುಂಬಿದರು ಸರಿಯಾಗಿ ಬೆಳೆ ವಿಮೆ ಪಾವತಿಯಾಗುತ್ತಿಲ್ಲ. ಈ ಎಲ್ಲಾ ಅಂಶಗಳನ್ನು ಸರ್ಕಾರ ಗಂಭೀರವಾಗಿ ಪರಿಗಣನೆಗೆ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಒತ್ತಾಯಿಸಿದರು.

**ಸಮ್ಮೇಳನದ ನಿರ್ಣಯ :** ಹರಪನಹಳ್ಳಿ ಪಟ್ಟಣ ದಲ್ಲಿ ನಡೆದ ವಿಜಯನಗರ ಜಿಲ್ಲಾ ಸಮ್ಮೇಳನದಲ್ಲಿ ಹರಪನಹಳ್ಳಿ ತಾಲ್ಲೂಕಿನ 60 ಕೆರೆಗಳ ಕಾಮಗಾರಿಯನ್ನು ಅತಿ ಶೀಘ್ರವಾಗಿ ಪೂರ್ಣಗೊಳಿಸಿ, ನೀರು ತುಂಬಿಸಲು ಮುಂದಾಗ ಬೇಕು. ಕೇಂದ್ರದ ಕರಾಳ ಮಸೂದೆಗಳ ಸಂಬಂಧಿತ ತಿದ್ದುಪಡಿಗಳನ್ನು ರದ್ದುಪಡಿಸಬೇಕು. ಕನಿಷ್ಠ ಬೆಂಬಲ ಬೆಲೆ ನಿಗದಿಗೆ ಸ್ಪಷ್ಟ ಕಾನೂನು ರೂಪಿಸಬೇಕು. ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು. ರೈತರ ಕೃಷಿ ವಿದ್ಯುತ್ ಪಂಪಸೆಟ್‌ಗಳಿಗೆ ಸಂಪರ್ಕ ಕಲ್ಪಿಸಲು ಮುಂದಾಗಬೇಕು. ಬೆಳೆ ವಿಮೆ ಲೋಪದೋಷಗಳನ್ನು ಸರಿಪಡಿಸಬೇಕು. ರೈತರೊಂದಿಗೆ ಸಭೆ ಕರೆಯಬೇಕು ಎಂದು ನಿರ್ಣಯ ತೆಗೆದುಕೊಳ್ಳಲಾಯಿತು.

**ಜಿಲ್ಲಾ ಪದಾಧಿಕಾರಿಗಳ ಆಯ್ಕೆ:** ವಿಜಯನಗರ ಜಿಲ್ಲಾ ಅಖಿಲ ಭಾರತ ಕಿಸಾನ್ ಸಭಾ ಜಿಲ್ಲಾಧ್ಯಕ್ಷರಾಗಿ ಗುಡಿಹಳ್ಳಿ ಹಾಲೇಶ್ ಹಾಗೂ ಕಾರ್ಯದರ್ಶಿಯಾಗಿ ಶಾಂತರಾಜ ಜೈನ್ ರವರನ್ನು ಆಯ್ಕೆ ಮಾಡಲಾಯಿತು.

ಉಪಾಧ್ಯಕ್ಷರಾಗಿ ಟಿ. ಪರಸಪ್ಪ, ಮತ್ತಿಹಳ್ಳಿ ನಾಗರಾಜಪ್ಪ, ಸಹಕಾರ್ಯದರ್ಶಿ ಡಿ. ಮುಕುಂದಗೌಡ, ಸಂಘಟನಾ ಕಾರ್ಯದರ್ಶಿ ಮರಿಗೌಡ, ಖಜಾಂಚಿಯಾಗಿ ಹೊನ್ನಪ್ಪ ಸಿ. ಹಾಗೂ ಕಾರ್ಯಕಾರಿಣಿಗೆ 12ಕ್ಕೂ ಹೆಚ್ಚು ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

# 'ನಮ್ಮ ಹೊಲ, ನಮ್ಮ ದಾರಿ' ಕಾಮಗಾರಿಗೆ ಹಾಕುವ ಜಿಎಸ್‌ಟಿ, ರಾಯಲ್ಟಿ ಕೈಬಿಡಲು ಆಗ್ರಹ

## ಹೊನ್ನಾಳಿಯಲ್ಲಿ ಅಖಂಡ ಕರ್ನಾಟಕ ರೈತ ಸಂಘದಿಂದ ಪ್ರತಿಭಟನೆ



> ರೈತರ ಜೀವನಾಡಿಯಾದ ಹಸುಗಳು ಆಕಸ್ಮಿಕವಾಗಿ ಸತ್ತರೆ, ಸರ್ಕಾರ 50 ಸಾವಿರ ಪರಿಹಾರ ಘೋಷಿಸಬೇಕು. ಪ್ರತಿ ತಾಲ್ಲೂಕಿನಲ್ಲಿ ಗೋಶಾಲೆಗಳನ್ನು ಸ್ಥಾಪಿಸಿ, ಗೋವುಗಳ ರಕ್ಷಣೆಗೆ ಸರ್ಕಾರ ಮುಂದಾಗಬೇಕು.
>
> **- ಅರಬಗಟ್ಟೆ ಕೆ.ಸಿ.ಬಸಪ್ಪ,** ಅಧ್ಯಕ್ಷರು, ರೈತ ಸಂಘ

ಹೊನ್ನಾಳಿ, ಮೇ 6 - ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು,ರೈತರ ಪಂಪ್‌ಸೆಟ್‌ಗಳಿಗೆ ಹಗಲಿನಲ್ಲಿ 10 ಗಂಟೆ ಕರೆಂಟ್ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘ ಪಕ್ಷಾತೀತ ಬಣ ತಾಲ್ಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಹೊನ್ನಾಳಿ ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರಿಗೆ ಮನವಿ ಸಲ್ಲಿಸಿದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಎಚ್. ದೊಡ್ಡೇರಹಳ್ಳಿ ನಾಗರಾಜಪ್ಪ ಮಾತನಾಡಿ, ಇತ್ತೀಚಿಗೆ ಅಧಿಕಾರಕ್ಕೆ ಬಂದ ಎಲ್ಲಾ ಸರ್ಕಾರಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ರೈತರ ಸಾಲಮನ್ನಾ ಮಾಡುತ್ತೇವೆ ಎಂದು ಭರವಸೆ ನೀಡಿ ಅಧಿಕಾರಕ್ಕೆ ಬರುತ್ತವೆ. ಆದರೆ ರೈತರ ಸಾಲಮನ್ನಾ ಮಾಡದೆ ವಚನ ಭ್ರಷ್ಟರಾಗುತ್ತಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ರೈತರು ಬೆಳೆದ ಬೆಳೆಗಳಿಗೆ ಈವರೆಗೂ ವೈಜ್ಞಾನಿಕ ಬೆಲೆ ನಿಗದಿ ಮಾಡಿಲ್ಲ, ರಾಗಿಯನ್ನು ಇಂತಿಷ್ಟೇ ಖರೀದಿ ಮಾಡಬೇಕು ಎಂದರೆ ಹೆಚ್ಚು ಬೆಳೆದ ರಾಗಿಯನ್ನು ಎಲ್ಲಿಗೆ ಹಾಕಬೇಕು ಎಂದು ಅವರು ಪ್ರಶ್ನಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೀಘ್ರ ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಉದ್ಯೋಗ ಖಾತ್ರಿ ಯೋಜನೆಯಲ್ಲಿ 'ನಮ್ಮ ಹೊಲ, ನಮ್ಮ ದಾರಿ' ಕಾಮಗಾರಿಗೆ ಹಾಕಲಾಗುವ ಜಿಎಸ್‌ಟಿ ಮತ್ತು ರಾಯಲ್ಟಿಯನ್ನು ಕೈಬಿಡಬೇಕು. ಇದರಿಂದ ರೈತರಿಗೆ ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ರೈತ ಸಂಘದ ಮುಖಂಡ ಬೆಳಗುತ್ತಿ ಉಮೇಶ್ ಮಾತನಾಡಿ, ಒಬ್ಬ ಶಾಸಕ, ಎಂ.ಪಿ. ಹಾಗೂ ಸರ್ಕಾರಿ ನೌಕರರ ವೇತನವನ್ನು ಯಾವುದೇ ಚರ್ಚೆ ಇಲ್ಲದೆ ದುಪ್ಪಟ್ಟು ಮಾಡಿಕೊಳ್ಳುತ್ತಾರೆ. ಅದೇ ರೀತಿ ಎಲ್ಲಾ ರೀತಿಯ ವೃದ್ಧಾಪ್ಯ, ಅಂಗವಿಕಲ, ವಿಧವಾ ವೇತನ ಸೇರಿದಂತೆ ಎಲ್ಲಾ ಸಾಮಾಜಿಕ ಭದ್ರತೆಯ ವೇತನಗಳನ್ನು 5 ಸಾವಿರಕ್ಕೆ ನಿಗದಿ ಮಾಡಬೇಕು, ಇದರಿಂದ ಬಡತನ ರೇಖೆಗಿಂತ ಕೆಳಸ್ತರದವರಿಗೆ ಜೀವನೋಪಾಯಕ್ಕೆ ಅನುಕೂಲವಾಗು ತ್ತದೆ ಎಂದು ಸರ್ಕಾರದ ಗಮನಕ್ಕೆ ತಂದರು.

ತಾಲ್ಲೂಕು ಅಧ್ಯಕ್ಷ ಉಮೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕರಿಬಸಪ್ಪ, ಹಿರೇಮಠದ ಬಸವರಾಜಪ್ಪ, ಎಚ್.ಬಿ.ಬಸವರಾಜಪ್ಪ, ನ್ಯಾಮತಿ ತಾಲ್ಲೂಕು ರೈತ ಮುಖಂಡ ಮಲ್ಲಿಕಾರ್ಜುನ್, ನೀಲಕಂಠ ರಾಯ್ಕರ್, ಬಸ ವನಹಳ್ಳಿ ಎಸ್. ಆನಂದ, ಶ್ರೀನಿವಾಸ್, ಗೋಣಿಗೆರೆ ಕುಬೇ ರಪ್ಪ ಹಾಗೂ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಹೊಲಗಳಲ್ಲಿ ಮಾಲಿನ್ಯ : ವರದಿ

**(1ನೇ ಪುಟದಿಂದ)** ಮೈಕ್ರೋ ಪ್ಲಾಸ್ಟಿಕ್ ಕಂಡು ಬಂದಿದೆ. ಪ್ಲಾಸ್ಟಿಕ್ ಹಾಳೆಗಳ ಅತಿಯಾದ ಬಳಕೆಯೇ ಇದಕ್ಕೆ ಕಾರಣವಾಗಿದೆ. ಪ್ಲಾಸ್ಟಿಕ್ ಹಾಳೆ ಬಳಸುವ ಹಾಗೂ ಬಳಸದೇ ಇರುವ ಹೊಲಗಳ ಪರೀಕ್ಷೆ ನಡೆಸಿದ ನಂತರ ಈ ವರದಿ ರೂಪಿಸಲಾಗಿದೆ. ಪ್ಲಾಸ್ಟಿಕ್ ಹಾಳೆ ಬಳಸುವ ಹೊಲಗಳಲ್ಲಿ ಮಾಲಿನ್ಯ ಹೆಚ್ಚಾಗಿದೆ.

ಆಧುನಿಕ ಕೃಷಿ ವ್ಯವಸ್ಥೆಯಲ್ಲಿ ಪ್ಲಾಸ್ಟಿಕ್ ಬಳಕೆ ಹೆಚ್ಚಿಸುತ್ತಿರುವುದರಿಂದ ಪರಿಸರ ಸುಸ್ಥಿರತೆ ಮೇಲೆ ಪರಿಣಾಮವಾಗುತ್ತಿದೆ. ಪ್ಲಾಸ್ಟಿಕ್ ಹಾಳೆಗಳು ತೆಳವಾಗಿರುವುದರಿಂದ ಅವುಗಳನ್ನು ಹೊಲದಲ್ಲಿ ಬಳಸಿದ ನಂತರ ವಿಲೇವಾರಿ ಕಠಿಣವಾಗಿದೆ. ಹೀಗಾಗಿ ಪ್ಲಾಸ್ಟಿಕ್ ಹಾಳೆಗಳನ್ನು ಹೊಲಗಳಲ್ಲೇ ಎಸೆಯಲಾಗುತ್ತಿದೆ. ಇದರಿಂದಾಗಿ ಮೈಕ್ರೋಪ್ಲಾಸ್ಟಿಕ್ ಮಣ್ಣು ಸೇರುತ್ತಿದೆ. ಇದು ಪರಿಸರ ಹಾಗೂ ಮನುಕುಲಗಳೆರಡಕ್ಕೂ ಅಪಾಯಕಾರಿ ಎಂದು ಟಾಕ್ಸಿಕ್ ಲಿಂಕ್ ಮುಖ್ಯ ಯೋಜನಾ ಸಂಯೋಜಕರಾದ ಪ್ರೀತಿ ಬಂಥಿಯ ಮಹೇಶ್ ಹೇಳಿದ್ದಾರೆ.

ಕೃಷಿಯಲ್ಲಿ ಮೊದಲು ತೇವಾಂಶ ಕಾಯ್ದುಕೊಳ್ಳಲು ಒಣ ಎಲೆ, ಕಸ ಕಡ್ಡಿ ಇತ್ಯಾದಿ ಬಳಸಲಾಗುತ್ತಿತ್ತು. ಇತ್ತೀಚಿನ ದಿನಗಳಲ್ಲಿ ವಿಶ್ವದಾದ್ಯಂತ ಪ್ಲಾಸ್ಟಿಕ್ ಬಳಕೆ ಹೆಚ್ಚಾಗುತ್ತಿದೆ.

# ವೃದ್ಧಾಶ್ರಮಕ್ಕೆ ಹೋಗಬೇಕಾದೀತು



**(1ನೇ ಪುಟದಿಂದ)** ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ವೈದಿಕ ಪರಂಪರೆಯಲ್ಲಿ 16 ಸಂಸ್ಕಾರಗಳಿದ್ದು, ಈಗ ಕೆಲವೇ ಸಂಸ್ಕಾರಗಳನ್ನು ಮಾಡಲಾಗುತ್ತಿದೆ. ಉಪನಯನ ಮಗುವಿಗೆ 2ನೇ ಜನ್ಮ ಪಡೆದಂತೆ ಎಂದ ಶ್ರೀಗಳು ಉಪನಯನ ಆಗದವನು ಶೂದ್ರನಿದ್ದಂತೆ ಎಂದರು.

ಮಕ್ಕಳಿಗೆ ಆರಂಭದಲ್ಲಿ ಒಳ್ಳೆಯ ಸಂಸ್ಕಾರ ಕಲಿಸದಿದ್ದರೆ ಮುಂದೆ ನೀವೇ ವೃದ್ಧಾಶ್ರಮಕ್ಕೆ ಹೋಗುವ ಪರಿಸ್ಥಿತಿ ಬರಬಹುದೆಂದು ಎಚ್ಚರಿಸಿದ ಶ್ರೀಗಳು, ಮಲೇಬೆನ್ನೂರಿನಲ್ಲಿ ಕಾಳಿಕಾದೇವಿ ಮೂರ್ತಿಗೆ ಬಹಳ ಶಕ್ತಿ ಇದ್ದು, ತುಂಬಾ ಆಕರ್ಷಣೀಯವಾಗಿದೆ ಎಂದರು.

ವಿಶ್ವಕರ್ಮ ಸಮಾಜದವರು ತಮ್ಮ ಕಾಯಕದ ಜೊತೆಗೆ ಶೈಕ್ಷಣಿಕವಾಗಿ, ರಾಜಕೀಯವಾಗಿ ಜಾಗೃತರಾಗಬೇಕು, ಸಾರ್ವತ್ರಿಕ ಚುನಾವಣೆಗಳು ಬಂದಾಗ ಶ್ರೀ ಶಿವ ಸುಜ್ಞಾನ ತೀರ್ಥ ಸ್ವಾಮೀಜಿ ಅವರು ನೀಡುವ ಆದೇಶ ಪಾಲಿಸಬೇಕೆಂದು ಶ್ರೀ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ವಿಶ್ವಕರ್ಮ ಸಮಾಜದವರು ಕಾಯಕದ ಜೊತೆಗೆ ತಮ್ಮ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದು ಕರೆ ನೀಡಿದರು.

ಜಿಲ್ಲಾ ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಬಸಾಪುರದ ನಾಗೇಂದ್ರಚಾರ್, ಮಲೇಬೆನ್ನೂರಿನ ಕುರುವತ್ತಿ ಸಾಮಿಲ್ ಮಾಲೀಕರಾದ ಎಂ.ಈ. ಮಲ್ಲಿಕಾರ್ಜುನಚಾರ್, ನಿವೃತ್ತ ಉಪ ತಹಶೀಲ್ದಾರ್ ರಾಜಾಚಾರ್, ದಾವಣಗೆರೆ ಷುಗರ್ ಕಂಪನಿಯ ನಿವೃತ್ತ ಕ್ಷೇತ್ರ ವೀಕ್ಷಕ ಎನ್. ವಿ.ಕಾಳಾಚಾರ್ ನಲ್ಕುದರೆ ಮತ್ತು ರಥ ಶಿಲ್ಪಿ ಕೆ.ಕೇಶವಾಚಾರ್ ಅವರುಗಳನ್ನು ಸನ್ಮಾನಿಸಲಾಯಿತು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಅರಕಲಗೂಡಿನ ಅರೆ ಮಾದನಹಳ್ಳಿಯ ಸುಜ್ಞಾನ ಮಹಾಸಂಸ್ಥಾನ ಮಠದ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿದರು.

ಮಲೇಬೆನ್ನೂರು ವಿಶ್ವಕರ್ಮ ಸಮಾಜದ ಅಧ್ಯಕ್ಷ ಕೆ.ಎನ್. ವೀರಾಚಾರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಶಿವಾನಂದ ಗುರೂಜೀ, ದಾವಣಗೆರೆ ಎ.ಬಿ. ರವಿ, ಹರಿಹರ ತಾ, ವಿಶ್ವಕರ್ಮ ಸಮಾಜದ ಅಧ್ಯಕ್ಷ ಎಸ್.ರುದ್ರಾಚಾರ್, ಕೆ.ಎಸ್. ಮೌನೇಶ್ವರಚಾರ್ ವೇದಿಕೆಯಲ್ಲಿದ್ದರು. ವಿ. ಆನಂದಚಾರ್ ಸ್ವಾಗತಿಸಿದರು, ಎಂ. ಪ್ರಕಾಶ್ ವಂದಿಸಿದರು.

## ವಿದೇಶಿ ಸರಕುಗಳ ಗುಲಾಮಗಿರಿ ಕಡಿಮೆಯಾಗಲಿ : ಮೋದಿ

ನವದೆಹಲಿ, ಮೇ 6 – ವಿದೇಶಿ ಸರಕುಗಳ ಗುಲಾಮಗಿರಿಯನ್ನು ಕಡಿಮೆ ಮಾಡಿ, ಸ್ಥಳೀಯ ವಸ್ತುಗಳಿಗೆ ಉತ್ತೇಜನ ನೀಡುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಜಿತೊ ಕನೆಕ್ಟ್ 2022 – ಔದ್ಯಮಿಕ ಸಭೆಯಲ್ಲಿ ಮಾತನಾಡುತ್ತಿದ್ದ ಪ್ರಧಾನಿ, ಸ್ಥಳೀಯ ಸರಕುಗಳಿಗೆ ಆದ್ಯತೆ ನೀಡಬೇಕಿದೆ ಮತ್ತು ವಿದೇಶಿ ಸರಕುಗಳ ಬಳಕೆ ಕಡಿಮೆ ಮಾಡಬೇಕಿದೆ ಎಂದಿದ್ದಾರೆ. ದೇಶ ಇಂದು ಪ್ರತಿಭೆ ಹಾಗೂ ತಂತ್ರಜ್ಞಾನಕ್ಕೆ ಅತಿ ಹೆಚ್ಚಿನ ಆದ್ಯತೆ ನೀಡುತ್ತಿದೆ. ಪ್ರತಿದಿನ ಹತ್ತಾರು ನವೋದ್ಯಮಗಳು ಆರಂಭಗೊಳ್ಳುತ್ತಿವೆ ಎಂದವರು ಹೇಳಿದ್ದಾರೆ.

ಆತ್ಮನಿರ್ಭರ ಭಾರತ ನಮ್ಮ ದಾರಿ ಹಾಗೂ ನಮ್ಮ ಬದ್ಧತೆಯಾಗಿದೆ. ಸರ್ಕಾರ ಪಾರದರ್ಶಕವಾಗುವ ಪ್ರಕ್ರಿಯೆಯಲ್ಲಿದೆ ಎಂದಿದ್ದಾರೆ.


## ಏಳನೇ ವರ್ಷದ ಪುಣ್ಯಸ್ಮರಣೆ



ಜನನ : 01.07.1949 ಮರಣ : 07.05.2015

ಉಸಿರು ಹೋದರೂ ಹೆಸರು ಉಳಿಸಿದ

**ಶ್ರೀ ಪಿ. ರಾಮನಗೌಡ್ರು**

ಹಿರಿಯ ವಕೀಲರು ಹಾಗೂ ಅಧ್ಯಕ್ಷರು, ಡಿಡಿಸಿಸಿ ಬ್ಯಾಂಕ್, (2013-2015) ದಾವಣಗೆರೆ ಜಿಲ್ಲೆ.

*ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಚ್ಚ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ*

ಶ್ರೀಮತಿ ಪಿ. ಕೊಟ್ರಮ್ಮ ರಾಮನಗೌಡ್ರು ಮತ್ತು ಮಕ್ಕಳು, ಮೊಮ್ಮಕ್ಕಳು. ಚಿಗಟೇರಿ ಪರಶುರಾಮಪ್ಪನವರ ವಂಶಸ್ಥರು ಹಾಗೂ ಬಂಧು-ಮಿತ್ರರು.



## ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರ

ದಾವಣಗೆರೆ, ಮೇ 6- ಇದೇ ದಿನಾಂಕ 10 ರಿಂದ 17 ರವರೆಗೆ 8 ದಿನಗಳ ಕಾಲ ಉಚಿತವಾಗಿ ಮಕ್ಕಳ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿದೆ. 5 ವರ್ಷದಿಂದ 16 ವರ್ಷದ ವಯೋಮಾನದೊಳಗಿನ ಆಸಕ್ತ ಮಕ್ಕಳು ಈ ಬೇಸಿಗೆ ಶಿಬಿರದಲ್ಲಿ ಪಾಲ್ಗೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ದುರ್ಗಾಂಬಿಕಾ ಶಾಲೆ ಮುಂಭಾಗ, ಸರಸ್ವತಿ ಬಡಾವಣೆ ಇಲ್ಲಿಗೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಇದೇ ದಿನಾಂಕ 10 ಕೊನೆಯ ದಿನ.

ಶಿಬಿರದಲ್ಲಿ ಚಿತ್ರಕಲೆ, ಕರಕುಶಲ ಕಲೆ, ಜೇಡಿ ಮಣ್ಣಿನ ಕಲೆ, ಸಮೂಹ ನೃತ್ಯ, ಕಸದಿಂದ ರಸ, ಯೋಗಾಭ್ಯಾಸ ಚಟುವಟಿಕೆಗಳು ಇರುತ್ತವೆ. ಶಿಬಿರ ನಡೆಯುವ ಸ್ಥಳ ಶ್ರೀ ದುರ್ಗಾಂಬಿಕಾ ಪ್ರೌಢಶಾಲೆ, ಹೊಂಡದ ಸರ್ಕಲ್ ಹತ್ತಿರ, ದಾವಣಗೆರೆ.ಹೆಚ್ಚಿನ ಮಾಹಿತಿಗಾಗಿ 08192-263213 ಸಂಪರ್ಕಿಸಬಹುದು.

### ಆರ್. ಪರಮೇಶ್ವರಪ್ಪ ನಿಧನ



ಹರಿಹರದ ಎಕೆ ಕಾಲೋನಿ 3 ನೇ ಕ್ರಾಸ್ ವಾಸಿ, ನಿವೃತ್ತ ಬೆಸ್ಕಾಂ ಅಧಿಕಾರಿಗಳು ಹಾಗೂ ಸಹನಾ ಆರ್ಕೆಸ್ಟ್ರಾದ ಮಾಲೀಕರು ಹಾಗೂ ಗಾಯಕರೂ ಆದಂತಹ ಆರ್. ಪರಮೇಶ್ವರಪ್ಪ (63) ಇವರು ದಿನಾಂಕ 5.5.2022 ರಂದು ಅಪಘಾತದಿಂದ ಗಾಯಗೊಂಡಿದ್ದು ದಿನಾಂಕ : 6.5.2022 ರ ಶುಕ್ರವಾರ ರಾತ್ರಿ 11 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.3.2022ರ ಶನಿವಾರ ಮಧ್ಯಾಹ್ನ 4 ಗಂಟೆಗೆ ಹರಿಹರದ ಪರಿಶಿಷ್ಟರ ರುದ್ರಭೂಮಿಯಲ್ಲಿ ನೆರವೇರಲಿದೆ.

# ನಗರದಲ್ಲಿ ಅಂಚೆ ಅಧೀಕ್ಷಕರ ಕಚೇರಿ : ಬಿಜೆಪಿ ಕಾನೂನು ಪ್ರಕೋಷ್ಠ ಹರ್ಷ

ದಾವಣಗೆರೆ, ಮೇ 6- ಸಂಸದ ಜಿ.ಎಂ. ಸಿದ್ದೇಶ್ವರ ಅವರ ಜನಪರ ಕಾಳಜಿಯಿಂದಾಗಿ ನಗರದಲ್ಲಿ ಪ್ರತ್ಯೇಕ ಅಂಚೆ ಅಧೀಕ್ಷಕರ ಕಚೇರಿ ಪ್ರಾರಂಭವಾಗಿರುವುದು ಹರ್ಷ ತಂದಿದೆ ಎಂದು ಬಿಜೆಪಿ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಹೆಚ್. ದಿವಾಕರ್, ರಾಜ್ಯ ಸಮಿತಿ ಸದಸ್ಯ ಎ.ಸಿ. ರಾಘವೇಂದ್ರ, ಕೆ.ಹೆಚ್. ಧನಂಜಯ್, ಎ.ಎಸ್. ಮಂಜುನಾಥ್ ಅಭಿನಂದಿಸಿದ್ದಾರೆ.

ಇದುವರೆಗೂ ಚಿತ್ರದುರ್ಗ ವಿಭಾಗದಲ್ಲಿ ಅಂಚೆ ಅಧೀಕ್ಷಕರ ಕಚೇರಿ ಅಧೀನದಲ್ಲಿತ್ತು. ಪ್ರತ್ಯೇಕ ಕಚೇರಿಗಾಗಿ 1997 ರಿಂದಲೂ ಅನೇಕ ಬಾರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದೀಗ ಸಂಸದರ ಪರಿಶ್ರಮದಿಂದ ದಾವಣಗೆರೆ ಜನರ ಬಹು ದಿನದ ಬೇಡಿಕೆ ಈಡೇರಿದಂತಾಗಿದೆ ಎಂದು ಅವರು ಹೇಳಿದ್ದಾರೆ.

# ಕಾಳಸಂತೆಯಲ್ಲಿ ಪಡಿತರ: ಕಟ್ಟುನಿಟ್ಟಿನ ಕ್ರಮಕ್ಕೆ ಸೂಚನೆ

**(1ನೇ ಪುಟದಿಂದ)** ಮೇಲೆ ದಾಳಿ ನಡೆಸಿ, ನಾವು ಅಕ್ರಮ ಸಾಗಾಣಿಕೆ ಬಗ್ಗೆ ಹೇಳಿದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಎಸ್.ವಿ. ರಾಮಚಂದ್ರ ಮಾತನಾಡಿ, ಈಗಲೇ ಬನ್ನಿ ಅಕ್ರಮ ಪಡಿತರ ತೋರಿಸುತ್ತೇನೆ. ಅವರ ಮೇಲೆ ಕ್ರಮ ಕೈಗೊಳ್ಳಲು ನಿಮಗೆ ಸಾಧ್ಯವೇ? ಎಂದು ಪ್ರಶ್ನಿಸಿದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿ ಮಂಟೆಸ್ವಾಮಿ ಉತ್ತರಿಸುತ್ತಾ, ಈಗಾಗಲೇ ಅನೇಕ ಕಡೆ ಪೊಲೀಸ್ ಇಲಾಖೆ ಸಹಕಾರದೊಂದಿಗೆ ಅಕ್ರಮ ಪಡಿತರ ದಾಸ್ತಾನು ವಶಪಡಿಸಿಕೊಂಡು, ಎಫ್‌ಐಆರ್ ದಾಖಲಿಸಲಾಗಿದೆ ಎಂದರು.

ಎಸ್ಪಿ ಸಿ.ಬಿ. ರಿಷ್ಯಂತ್ ಮಾತನಾಡಿ, ಮನೆಗಳಿಂದ ಅಕ್ಕಿ ಸಂಗ್ರಹಿಸಿ ಪಾಲಿಶ್ ಮಾಡಿಸಿ ಹೆಚ್ಚಿನ ದರಕ್ಕೆ ಮಾರಾಟ ಮಾಡಲಾಗುತ್ತದೆ. ಅಂತವರ ಮೇಲೆ ದೂರು ದಾಖಲಿಸಿದ್ದೇವೆ. ಈ ಹಿಂದೆ ಪಡಿತರ ಮಾರಾಟಗಾರರ ಮೇಲೆ ಕ್ರಮ ಕೈಗೊಳ್ಳಲು ದೂರು ನೀಡಲು ಅಧಿಕಾರಿಗಳೇ ಮುಂದೆ ಬರುತ್ತಿರಲಿಲ್ಲ. ಆದರೆ ಈಗ ಅಧಿಕಾರಿಗಳು ದೂರು ನೀಡುತ್ತಿದ್ದಾರೆ. ವಶಪಡಿಸಿಕೊಂಡ ಅಕ್ಕಿ ಪಡಿತರದ್ದು ಎಂದು ತಿಳಿಸುವಲ್ಲಿ ಗೊಂದಲಗಳುಂಟಾಗುತ್ತಿವೆ ಎಂದರು.

ಕೊರೊನಾ ಲಸಿಕಾ ಕರಣಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಉಸ್ತುವಾರಿ ಸಚಿವರು ಡಿಹೆಚ್‌ಒ ನಾಗರಾಜ್ ಅವರಿಗೆ ಸೂಚಿಸಿದರು. ಲಸಿಕೆಯಿಂದಲೇ ಇಂದು ಎಲ್ಲರೂ ನೆಮ್ಮದಿ ಜೀವನ ನಡೆಸಲು ಸಾಧ್ಯವಾಗಿದೆ. ತಿಂಗಳಾಂತ್ಯದಲ್ಲಿ ಸಮರ್ಪಕವಾಗಿ ಲಸಿಕೆ ನೀಡಿ ಎಂದು ಹೇಳಿದರು.

ಖರೀದಿ ಕೇಂದ್ರದಲ್ಲಿ ರಾಗಿ ಖರೀದಿ ಬಗ್ಗೆ ರೈತರು ಅಸಮಾಧಾನಗೊಂಡಿರುವ ಬಗ್ಗೆ ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಸಚಿವ ಭೈರತಿ ಬಸವರಾಜ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಮುಂಗಾರು ಹಂಗಾಮಿನ ರಾಗಿ ಖರೀದಿಗೆ ಮಾತ್ರ ಅವಕಾಶವಿತ್ತು. ರೈತರು ಹಿಂಗಾರು ರಾಗಿಯನ್ನೂ ಖರೀದಿಸುವಂತೆ ಹೇಳುತ್ತಿದ್ದಾರೆ. ಖರೀದಿಗೆ ಅವಕಾಶ ನೀಡುವಂತೆ ಸರ್ಕಾರಕ್ಕೆ ಕೋರಿಕೊಳ್ಳಲಾಗಿದೆ. ಫ್ರೂಟ್ ತಂತ್ರಾಂಶದ ಐಡಿ ಆಧಾರದ ಮೇಲೆಯೇ ಖರೀದಿ ನಡೆಯುತ್ತಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿ ಮಂಟೇಸ್ವಾಮಿ ಹೇಳಿದರು.



> **20 ಸಾವಿರ ಹೆ. ತೊಗರಿ ಗುರಿ, ಸೋಯಾಬಿನ್ ಪರಿಚಯಕ್ಕೆ ಚಿಂತನೆ**
>
> ಕಳೆದ ಬಾರಿ 14 ಸಾವಿರ ಹೆಕ್ಟೇರ್ ತೊಗರಿ ಬೆಳೆಯಲಾಗಿತ್ತು. ಈ ಬಾರಿ 20 ಸಾವಿರ ಹೆಕ್ಟೇರ್ ಗುರಿ ಹೊಂದಲಾಗಿದೆ. ಮೆಕ್ಕೆಜೋಳ ಬಿತ್ತನೆ ಬೀಜಕ್ಕೆ ಕೊರತೆ ಇಲ್ಲ. ಈ ಬಾರಿ ಹರಿಹರ, ಚನ್ನಗಿರಿ ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ ಸೋಯಾಬೀನ್ ಪರಿಚಯಿಸಲು ಚಿಂತನೆ ನಡೆಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಹೇಳಿದರು.
>
> ಮೇ ತಿಂಗಳಿಗೆ 22 ಸಾವಿರ ಟನ್ ರಸಗೊಬ್ಬರದ ಅಗತ್ಯವಿದೆ. ಪ್ರಸ್ತುತ ಜಿಲ್ಲೆಯಲ್ಲಿ 20 ಸಾವಿರ ಟನ್ ಗೊಬ್ಬರ ದಾಸ್ತಾನು ಇದೆ. ಏಪ್ರಿಲ್‌ನಲ್ಲಿ ಸರ್ಕಾರ ರಸಗೊಬ್ಬರಕ್ಕೆ ಸಹಾಯಧನ ಹೆಚ್ಚಿಸಿದೆ ಎಂದರು. ರಸಗೊಬ್ಬರ ಹಾಗೂ ಬಿತ್ತನೆ ಬೀಜಕ್ಕೆ ಕೊರತೆಯಾಗದಂತೆ ಎಚ್ಚರಿಕೆ ವಹಿಸುವಂತೆ ಸಚಿವ ಭೈರತಿ ಬಸವರಾಜ್ ಸೂಚಿಸಿದರು.
>
> ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಳೆ ಉತ್ತಮವಾಗಿದೆ. ಜಗಳೂರಿನಲ್ಲಿ ಈರುಳ್ಳಿ ಬೆಳೆ ಕಡಿಮೆಯಾಗಿ ಹತ್ತಿ ಹೆಚ್ಚಳವಾಗುತ್ತಿರುವುದು ವಿಶೇಷವಾಗಿದೆ ಎಂದು ಚಿಂತಾಲ್ ಹೇಳಿದರು.
>
> 15 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಗುರಿ ಹೊಂದಲಾಗಿದೆ. ಅಡುಗೆ ಎಣ್ಣೆ ದರ ಹೆಚ್ಚಳವಾಗಿರುವುದರಿಂದ ಸೂರ್ಯಕಾಂತಿಗೆ ವಿಶೇಷ ಒತ್ತು ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಯಾಂತ್ರೀಕೃತ ಭತ್ತದ ನಾಟಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಡ್ರಮ್ ಸೀಡರ್ ಮೂಲಕ ಭತ್ತದ ಬಿತ್ತನೆಯನ್ನು ಕೈಗೊಳ್ಳಲಾಗಿದೆ. ಚೆಲ್ಲು ಭತ್ತದ ಪದ್ಧತಿಗೆ ಸೂಕ್ತ ತಾಂತ್ರಿಕತೆಗಳನ್ನು ರೈತರಿಗೆ ಪ್ರಚುರಪಡಿಸಲಾಗುತ್ತಿದೆ. ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆಯಡಿ 22,260 ವಿದ್ಯಾರ್ಥಿಗಳಿಗೆ 9.25 ಕೋಟಿ ರೂಗಳಷ್ಟು ವಿದ್ಯಾರ್ಥಿ ವೇತನವನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿ ಮಾಡಲಾಗಿದೆ ಎಂದರು.

ಸಣ್ಣ ರೈತರ ಪಹಣಿ ಪಡೆದು ವ್ಯಾಪಾರಿಗಳು ರಾಗಿ ಮಾರಾಟ ಮಾಡುತ್ತಿದ್ದಾರೆ ಎಂದು ಸಂಸದರು ಹೇಳಿದರೆ, ಖರೀದಿ ಕೇಂದ್ರದಲ್ಲಿ ಮಧ್ಯವರ್ತಿಗಳ ಹಾವಳಿಯಿಂದಾಗಿ ಜಗಳೂರು ಭಾಗದ ರೈತರಿಗೆ ಹೆಚ್ಚು ಅನ್ಯಾಯವಾಗುತ್ತಿದೆ. ರಾಗಿ ಬೆಳೆಯದ ರೈತರ ಹೆಸರಿನಲ್ಲಿಯೇ ಖರೀದಿ ನಡೆಯುತ್ತಿದೆ. ಜನ ರೊಚ್ಚಿಗೆದ್ದರೆ ಕಷ್ಟ ಎಂದು ಎಚ್ಚರಿಸಿದರು. ಸಚಿವ ಭೈರತಿ ಬಸವರಾಜ್, ರೈತರಿಂದ ಅಪಸ್ವರ ಬರದಂತೆ ನೇರವಾಗಿ ರೈತರನ್ನೇ ಸಂಪರ್ಕಿಸಿ ಖರೀದಿಸಿ ಎಂದು ಸೂಚಿಸಿದರು.

**ಪಶುವೈದ್ಯರ ಕೊರತೆ:** ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಜಗಳೂರು ತಾಲ್ಲೂಕಿನಲ್ಲಿ ಲಸಿಕೆ ನೀಡಲು ಪಶು ವೈದ್ಯರೇ ಇಲ್ಲ ಎಂದರು. ಪಶು ಪಾಲನೆ ಹಾಗೂ ಪಶುವೈದ್ಯ ಸೇವಾ ಇಲಾಖೆಯಲ್ಲಿ ವೈದ್ಯರು, ಸಿಬ್ಬಂದಿಗಳ ಕೊರತೆ ಇರುವುದಾಗಿ ಇಲಾಖೆ ಅಧಿಕಾರಿಗಳು ತಿಳಿಸಿದರು. 'ಸಿಬ್ಬಂದಿ ಕೊರತೆ ಉತ್ತರವನ್ನು ನಾನು ಕೇಳಬಹುದು. ದನ-ಕರುಗಳು ಕೇಳ್ತವಾ?' ಎಂದು ಶಾಸಕರು ಕಿಡಿಕಾರಿದರು. ಈಗಾಗಲೇ ಸಿಬ್ಬಂದಿ ನೇಮಕದ ಬಗ್ಗೆ ಸಚಿವರು ಭರವಸೆ ನೀಡಿದ್ದು, ಜಿಲ್ಲೆಯಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಸಚಿವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಸಚಿವ ಭೈರತಿ ಹೇಳಿದರು.

**ಜಲಜೀವನ್ ಬಗ್ಗೆ ಕಾಳಜಿ ವಹಿಸಿ:** ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಅಧಿಕಾರಿ ಮಾಹಿತಿ ನೀಡಿ, ಜಿಲ್ಲೆಯ 876 ಗ್ರಾಮಗಳಲ್ಲಿ ಜಲಜೀವನ್ ಮಿಷನ್ ಅಡಿ ಕಾಮಗಾರಿಗಳು ಪ್ರಗತಿಯಲ್ಲಿದ್ದು 188 ಕಾಮಗಾರಿಗಳು ಪೂರ್ಣಗೊಂಡಿವೆ ಎಂದರು.

ಸಚಿವರು ಮಾತನಾಡಿ, ನರೇಂದ್ರ ಮೋದಿಯವರ ಮಹತ್ವಾಕಾಂಕ್ಷಿ ಯೋಜನೆಯಾದ ಜಲ ಜೀವನ್ ಬಗ್ಗೆ ಹೆಚ್ಚು ಕಾಳಜಿ ವಹಿಸುವಂತೆಯೂ, ಬೇಸಿಗೆಯಲ್ಲಿ ನೀರಿನ ಕೊರತೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುವಂತೆ ಸೂಚಿಸಿದರು. ಸಿಇಒ ಚನ್ನಪ್ಪ, ಇಲ್ಲಿಯವರೆಗೆ ಜಿಲ್ಲೆಯಲ್ಲಿ ಎಲ್ಲೂ ನೀರಿನ ಸಮಸ್ಯೆ ಇಲ್ಲ ಎಂದರು.

**ಅಂಗನವಾಡಿಗೆ ನಿವೇಶನ ಕೊರತೆ:** ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ನಗರದಲ್ಲಿ ನಿವೇಶನಗಳು ಸಿಗುತ್ತಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ವಿಜಯಕುಮಾರ್ ಹೇಳಿದರು. ಜಿಲ್ಲೆಗೆ ಒಟ್ಟು 358 ಕಟ್ಟಡಗಳು ಬೇಕು. 88 ಕಟ್ಟಡಗಳನ್ನು ಕಟ್ಟಲು ಮಾತ್ರ ಜಾಗವಿದೆ ಎಂದರು.

ಜಿಲ್ಲೆಯಲ್ಲಿ 400 ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶ ಹೆಚ್ಚಳವಾಗಿದೆ, 2.16 ಲಕ್ಷದಷ್ಟು ಸಸಿಗಳನ್ನು ಸಾರ್ವಜನಿಕರಿಗೆ ವಿತರಿಸಲಾಗಿದೆ ಎಂದು ಪ್ರಾದೇಶಿಕ ಅರಣ್ಯ ಇಲಾಖೆ ಅಧಿಕಾರಿ ಮಾಹಿತಿ ನೀಡಿದರು.

ಡಿಡಿಪಿಐ ತಿಪ್ಪೇಶಪ್ಪ ಮಾತನಾಡುತ್ತಾ, ಮೇ 15ಕ್ಕೆ ಎಸ್ಸೆಸ್ಸೆಲ್ಸಿ ಫಲಿತಾಂಶ ಬರಲಿದೆ . ಮೇ 16ರಿಂದ ಶಾಲಾರಂಭಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಸಭೆಯಲ್ಲಿ ಸಂಸದ ಜಿ.ಎಂ ಸಿದ್ದೇಶ್ವರ, ವಿಧಾನ ಪರಿಷತ್ ಸದಸ್ಯ ಕೆ.ಎಸ್ ನವೀನ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ ಸಿಇಒ ಡಾ.ಎ.ಚನ್ನಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್ ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.



**ಉಜ್ಜಯಿನಿ ತೇರು** ಕೊಟ್ಟೂರು ತಾಲ್ಲೂಕು ಉಜ್ಜಯಿನಿ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ಮಹಾ ರಥೋತ್ಸವವು ಶುಕ್ರವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರಿತು. ಇಂದು ದೇವಾಲಯದ ಗೋಪುರದ ಶಿಖರಕ್ಕೆ ತೈಲಾಭಿಷೇಕ ನಡೆಯಲಿದೆ.

# ಧರ್ಮರಕ್ಷಣೆ ಬಗ್ಗೆ ತಿಳಿಸಿದ ಶಂಕರಾಚಾರ್ಯರು

## ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ

ದಾವಣಗೆರೆ, ಮೇ 6- ಧರ್ಮರಕ್ಷಣೆಯ ಬಗ್ಗೆ ಜಗತ್ತಿಗೇ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಶಂಕರಾಚಾರ್ಯರು ಮೊದಲಿಗರು. ಅವರ ಆದರ್ಶ ಗುಣಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ಸಾಗಬೇಕು ಎಂದು ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಹೇಳಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ವತಿಯಿಂದ ಇಂದು ಆಯೋಜಿಸಲಾಗಿದ್ದ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ನಂತರ ಮಾತನಾಡಿದರು.

ಧರ್ಮ ಅವನತಿಯಲ್ಲಿ ಸಾಗುತ್ತಿರುವಾಗ ಜ್ಞಾನದ ಮೂಲಕ ಧರ್ಮ ರಕ್ಷಣೆಗೆ ನಿಂತ ಮಹನೀಯರು ಶ್ರೀ ಶಂಕರಾಚಾರ್ಯರು. ಇಂದು ಅವರ ಜಯಂತಿ ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ. ಮಹಾನ್ ನಾಯಕರುಗಳ ಆದರ್ಶ ಗುಣಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವಂತೆ ತಿಳಿಸಿದರು.

ಸಮಾಜದ ಅಧ್ಯಕ್ಷ ಡಾ.ಬಿ.ಟಿ ಅಚ್ಯುತ್ ಮಾತನಾಡಿ, ಆದಿ ಶಂಕರಾಚಾರ್ಯರ ದಿನಾಚರಣೆಯನ್ನು ಜಿಲ್ಲಾಡಳಿತದಿಂದ ಆಚರಿಸುತ್ತಿರುವುದರಿಂದ ಸಮಾಜದ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಶಂಕರಾಚಾರ್ಯರ ವಿಚಾರಧಾರೆಗಳನ್ನು ಎಲ್ಲರೂ ತಿಳಿಯಬೇಕು. ಈ ನಿಟ್ಟಿನಲ್ಲಿ ನಾವು ಶಂಕರ ಜಯಂತಿ ಹಾಗೂ ದಸರಾ ಹಬ್ಬದ ಸಮಯದಲ್ಲಿ 9 ದಿನಗಳ ಕಾಲ ಅವರ ಕುರಿತು ಉಪನ್ಯಾಸವನ್ನು ನೀಡುತ್ತಾ ಬರುತ್ತಿದ್ದೇವೆ ಎಂದು ಹೇಳಿದರು.

ಸಮಾಜದ ಎಂ.ಎಸ್ ವಿನಾಯಕ್ ಉಪನ್ಯಾಸ ನೀಡಿ, ಶಂಕರಾಚಾರ್ಯರನ್ನು ಇಡೀ ವಿಶ್ವವೇ ಆರಾಧಿಸುತ್ತಿದೆ. ಮನುಷ್ಯರ ಜೀವನದಲ್ಲಿ ಗುರು ಮುಖ್ಯ, ಗುರು ಇಲ್ಲದೆ ಏನು ನಡೆಯಲಾಗದು. ನಾವೆಲ್ಲರೂ ಭಗವಂತನ ಸ್ಮರಣೆ ಮಾಡಬೇಕು, ಶಂಕರಾಚಾರ್ಯರನ್ನು ಯಾವುದೇ ಒಂದು ಸಮುದಾಯಕ್ಕೆ ಸೀಮಿತಗೊಳಿಸದೆ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಿ, ಎಲ್ಲರೂ ಸಹ ಅವರ ಚಿಂತನೆಗಳನ್ನು ಪರಿಪಾಲಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ರವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಮಿತ್ ಬಿದರಿ, ಸಮಾಜದ ಪಿ.ಸಿ ಶ್ರೀನಿವಾಸ್, ಗಿರೀಶ್ ನಾಡಿಗ್, ಹೆಚ್.ಕೆ. ವೆಂಕಟೇಶ್, ಸುಬ್ಬಣ್ಣ, ಡಾ.ಶಶಿಕಾಂತ್, ಶ್ರೀರಾಮ್, ರಾಘವೇಂದ್ರ, ಪಿ.ಸಿ ರಾಮನಾಥ್ ಮತ್ತಿತರರು ಉಪಸ್ಥಿತರಿದ್ದರು.

# ಕೊರೊನಾ ಸಾವು : ಡಬ್ಲ್ಯೂಹೆಚ್‌ಓ ಅಂದಾಜಿಗೆ ಪರಿಣಿತರಿಂದ ಆಕ್ಷೇಪ

**ಭಾರತದಲ್ಲಿ ಸಾವುಗಳ ನೋಂದಣಿಯ ಸಶಕ್ತ ವ್ಯವಸ್ಥೆ ಇದೆ ಎಂದ ಪರಿಣಿತರು**

ನವದೆಹಲಿ, ಮೇ 6 – 2020ರಲ್ಲಿ ಭಾರತದಲ್ಲಿ ಕೊರೊನಾದಿಂದ 47 ಲಕ್ಷ ಜನ ಸಾವನ್ನಪ್ಪಿದ್ದರು ಎಂದು ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯೂ.ಹೆಚ್.ಓ.) ಹೇಳಿರುವುದನ್ನು ಪ್ರಶ್ನಿಸಿರುವ ಹಲವಾರು ಉನ್ನತ ಆರೋಗ್ಯ ಪರಿಣಿತರು, ಜಾಗತಿಕ ಆರೋಗ್ಯ ಸಂಸ್ಥೆ ತಪ್ಪು ಅಂದಾಜುಗಳ ಮೇಲೆ ಈ ನಿರ್ಧಾರಕ್ಕೆ ಬಂದಿರುವುದು ದುರದೃಷ್ಟಕರ ಎಂದಿದ್ದಾರೆ.

ಐ.ಸಿ.ಎಂ.ಆರ್. ಪ್ರಧಾನ ನಿರ್ದೇಶಕ ಬಲರಾಮ್ ಭಾರ್ಗವ, ನೀತಿ ಆಯೋಗದ ಸದಸ್ಯ ವಿ.ಕೆ. ಪೌಲ್, ಎಐಐಎಂಎಸ್ ನಿರ್ದೇಶಕ ರಣದೀಪ್ ಗುಲೇರಿಯ ಹಾಗೂ ಎನ್.ಟಿ.ಎ.ಜಿ.ಐ. ಕೊರೊನಾ ಕಾರ್ಯಪಡೆ ಅಧ್ಯಕ್ಷ ಡಾ. ಎನ್.ಕೆ. ಅರೋರ ಹೇಳಿಕೆ ನೀಡಿದ್ದು, ಡಬ್ಲ್ಯೂ.ಹೆಚ್.ಓ. ವರದಿ ದುರದೃಷ್ಟಕರ ಹಾಗೂ ಅಸಮರ್ಥನೀಯ ಎಂದಿದ್ದಾರೆ.

ಗುರುವಾರ ವರದಿಯೊಂದನ್ನು ಬಿಡುಗಡೆ ಮಾಡಿದ್ದ ವಿಶ್ವ ಆರೋಗ್ಯ ಸಂಘಟನೆ, ಕಳೆದ ಎರಡು ವರ್ಷಗಳಲ್ಲಿ ಕೊರೊನಾದಿಂದ 1.5 ಕೋಟಿ ಜನ ಸಾವನ್ನಪ್ಪಿದ್ದಾರೆ. ಇದು ಅಧಿಕೃತ ಅಂಕಿ ಅಂಶವಾದ 60 ಲಕ್ಷಕ್ಕಿಂತ ಎರಡೂವರೆ ಪಟ್ಟು ಹೆಚ್ಚು ಎಂದು ಹೇಳಿತ್ತು. ಈ ವರದಿಯ ಪ್ರಕಾರ ಭಾರತದಲ್ಲಿ ಕೊರೊನಾದಿಂದ 47 ಲಕ್ಷ ಜನ ಸಾವನ್ನಪ್ಪಿದ್ದಾರೆ. ಇದು ಅಧಿಕೃತ ಅಂಕಿ-ಅಂಶಗಳಿಗಿಂತ ಹತ್ತು ಪಟ್ಟು ಹೆಚ್ಚು. ವಿಶ್ವದ ಶೇ.33ರಷ್ಟು ಕೊರೊನಾ ಸಾವುಗಳು ಭಾರತದಲ್ಲೇ ಸಂಭವಿಸಿವೆ ಎಂದು ತಿಳಿಸಿತ್ತು.

ವರದಿಯನ್ನು ತಳ್ಳಿ ಹಾಕಿರುವ ಡಾ. ವಿ.ಕೆ.ಪೌಲ್, ಭಾರತಕ್ಕೆ ಸಂಬಂಧಿಸಿದಂತೆ ಅನ್ವಯಿಸಲಾಗಿರುವ ಮಾದರಿಯನ್ನು ಒಪ್ಪುವುದಿಲ್ಲ ಎಂದು ರಾಯಭಾರಿ ಮಾರ್ಗಗಳ ಮೂಲಕ ಡಬ್ಲ್ಯೂ.ಹೆಚ್.ಓ.ಗೆ ತಿಳಿಸುತ್ತಲೇ ಬರಲಾಗುತ್ತಿದೆ ಎಂದಿದ್ದಾರೆ.

ನಮ್ಮಲ್ಲಿ ಮರಣ ದಾಖಲೆಗೆ ಸಶಕ್ತವಾದ ವ್ಯವಸ್ಥೆ ಇದೆ. ಬುಧವಾರವಷ್ಟೇ 2020ರಲ್ಲಿ ಸಂಭವಿಸಿದ ಸಾವುಗಳ ಸಂಖ್ಯೆಯನ್ನು ಪ್ರಕಟಿಸಿದ್ದೇವೆ. 2021ರ ಸಂಖ್ಯೆಗಳೂ ಬರಲಿವೆ ಎಂದವರು ತಿಳಿಸಿದ್ದಾರೆ.

ಜನನ ಹಾಗೂ ಮರಣ ಪ್ರಮಾಣ ಪತ್ರಗಳನ್ನು ಪ್ರಮಾಣೀಕರಿಸಿ ಜಿಲ್ಲಾ ಹಾಗೂ ರಾಜ್ಯ ಆಡಳಿತಗಳ ಮೂಲಕ ಖಚಿತ ಪಡಿಸಿಕೊಳ್ಳಲಾಗುತ್ತದೆ ಎಂದವರು ತಿಳಿಸಿದ್ದಾರೆ.

ಮರಣ ನೋಂದಣಿ ಮಾಡುವ ವ್ಯವಸ್ಥೆ ದುರ್ಬಲವಾಗಿರುವ ಕಡೆಗಿನ ಊಹಾಪೋಹಗಳನ್ನೇ ಬಲಿಷ್ಠವಾಗಿರುವ ದೇಶಗಳಿಗೆ ಅನ್ವಯಿಸಬಾರದು. ಕೆಲ ವೆಬ್ ತಾಣಗಳು ಹಾಗೂ ಮಾಧ್ಯಮಗಳ ವರದಿ ಆಧರಿಸಿ ಅತಿಯಾದ ಸಾವಿನ ಸಂಖ್ಯೆ ಹೇಳುವುದನ್ನು ಒಪ್ಪಲಾಗದು ಎಂದು ಪೌಲ್ ಹೇಳಿದ್ದಾರೆ.

ಡಬ್ಲ್ಯೂ.ಹಚ್.ಓ. ವರದಿ ದುರದೃಷ್ಟಕರ ಎಂದಿರುವ ಎನ್.ಟಿ.ಎ.ಜಿ.ಐ. ಕೊರೊನಾ ಕಾರ್ಯಪಡೆ ಅಧ್ಯಕ್ಷ ಡಾ. ಎನ್.ಕೆ. ಅರೋರ, ಹಲವು ಪ್ರತಿಷ್ಠಿತ ಸಂಸ್ಥೆಗಳು ಭಾರತದಲ್ಲಿ ವಿನಾಶ ಉಂಟಾಗಲಿದೆ ಎಂದು ಅಂದಾಜಿಸಿದ್ದವು. ಆದರೆ, ಕೊರೊನಾ ಎದುರು ಭಾರತ ಉತ್ತಮವಾಗಿ ಕಾರ್ಯ ನಿರ್ವಹಿಸಿದೆ ಎಂದಿದ್ದಾರೆ.

ಡಾ. ಬಲರಾಮ್ ಭಾರ್ಗವ ಹೇಳಿಕೆ ನೀಡಿದ್ದು, ಕೊರೊನಾ ಸಾವು ಎಂಬುದಕ್ಕೆ ಯಾವುದೇ ವ್ಯಾಖ್ಯಾನವಿಲ್ಲ. ಡಬ್ಲ್ಯೂ.ಹೆಚ್.ಓ. ಸಹ ಯಾವುದೇ ವ್ಯಾಖ್ಯಾನ ಹೊಂದಿಲ್ಲ. ಹೀಗಾಗಿ ನಾವು ಕೊರೊನಾ ಪಾಸಿಟಿವ್ ಬಂದ ನಂತರ 30 ದಿನಗಳಲ್ಲಿ ಸಂಭವಿಸುವ ಸಾವುಗಳನ್ನು ಕೊರೊನಾ ಸಾವು ಎಂದು ಪರಿಗಣಿಸುತ್ತಿದ್ದೇವೆ ಎಂದಿದ್ದಾರೆ.

ಬ್ರಿಟನ್‌ನ ಎನ್.ಹೆಚ್.ಎಸ್. ಹಾಗೂ ಭಾರತ ಮಾತ್ರ ಈ ರೀತಿಯ ಮಾನದಂಡ ಬಳಸಿವೆ. ಹಲವಾರು ದೇಶಗಳು ಈ ರೀತಿಯ ವ್ಯಾಖ್ಯಾನ ಹೊಂದಿಲ್ಲ. ಎಲ್ಲ ಮಾಹಿತಿಯನ್ನು ವ್ಯವಸ್ಥಿತವಾಗಿ ಸಂಗ್ರಹಿಸಲಾಗಿದೆ ಎಂದವರು ತಿಳಿಸಿದ್ದಾರೆ.

ಡಾ. ರಣದೀಪ್ ಗುಲೇರಿಯ ಅವರು ಹೇಳಿಕೆ ನೀಡಿದ್ದು, ಮೂರು ಆಧಾರದ ಮೇಲೆ ಆಕ್ಷೇಪ ಇದೆ. ಮೊದಲನೆಯದಾಗಿ ನಮ್ಮಲ್ಲಿ ಮರಣ ನೋಂದಣಿಯ ಬಲಿಷ್ಠ ವ್ಯವಸ್ಥೆ ಇದೆ. ಡಬ್ಲ್ಯೂ.ಹೆಚ್.ಓ. ಬಳಸಿದ ಮಾನದಂಡ ಊಹಾಪೋಹ ಆಧರಿಸಿದ್ದಾಗಿದೆ. ಅದು ಬಳಸಿರುವ ಮಾಹಿತಿಯೇ ಪ್ರಶ್ನಾರ್ಹವಾಗಿದೆ. ಮೂರನೆಯದಾಗಿ ಭಾರತದಲ್ಲಿ ಕೊರೊನಾ ಸಾವುಗಳಿಗೆ ಪರಿಹಾರ ನೀಡಲಾಗುತ್ತಿದೆ. ಕೊರೊನಾ ಪರಿಹಾರಕ್ಕೆ ಜನ ಮುಂದೆ ಬಂದಾಗ ಹೆಚ್ಚುವರಿ ಸಾವುಗಳ ಬಗ್ಗೆ ತಿಳಿದಿರುತ್ತಿತ್ತು ಎಂದು ತಿಳಿಸಿದ್ದಾರೆ.

# ಹರಿಹರದಲ್ಲಿ 'ಮ್ಯಾಂಚೆಸ್ಟರ್' ಚಲನಚಿತ್ರದ ಮೂಹೂರ್ತ

ಹರಿಹರ, ಮೇ 6- ಆರ್. ಮಂಜುನಾಥ ನಿರ್ದೇಶನದ ಮತ್ತು ಸಂಪೂರ್ಣ ಗುಂಪು ನಿರ್ಮಾಣದ 'ಮ್ಯಾಂಚೆಸ್ಟರ್' ಚಲನಚಿತ್ರದ ಮುಹೂರ್ತ ಕಾರ್ಯಕ್ರಮ ಹರಿಹರದ ಹರಿಹರೇಶ್ವರ ದೇವಸ್ಥಾನದಲ್ಲಿ ನಡೆಯಿತು.



ಸಂಪೂರ್ಣ ಹೊಸಬರಿಂದ ಕೂಡಿರುವ ಮ್ಯಾಂಚೆಸ್ಟರ್ ಚಿತ್ರದ ನಾಯಕ ನಟನಾಗಿ ದಕ್ಷ, ನಾಯಕಿಯಾಗಿ ರಂಜಿತಾ, ಸಹ ಕಲಾವಿದರಾದ ವಿಷ್ಣು, ಸುರೇಶ್, ಪ್ರಶಾಂತ್, ಪವನ ನಟಿಸುತ್ತಿದ್ದಾರೆ.

ಚಿತ್ರದ ನಿರ್ದೇಶಕ ಮಾತನಾಡಿ, ಈ ಚಿತ್ರ ನಗರದಲ್ಲಿ ನಡೆಯುವ ಒಂದು ವಿಭಿನ್ನ ಘಟನೆಯನ್ನು ಒಳಗೊಂಡ ಕಥಾವಸ್ತುವನ್ನು ಹೊಂದಿದೆ.

ಸಂಪೂರ್ಣ ಹೊಸಬರಿಂದ ಕೂಡಿರುವ ಚಿತ್ರವಾದ್ದರಿಂದ ಯುವಕರನ್ನು ಉಳಿಸಿ, ಬೆಳೆಸಬೇಕಾದ್ದು ಪ್ರೇಕ್ಷಕರ ಕೈಯ್ಯಲ್ಲಿದೆ ಎಂದರು.

ಚಿತ್ರದ ಛಾಯಾಗ್ರಾಹಕ ಸತೀಶ್ ರಾಜೇಂದ್ರ, ಮಲ್ಲಿಕಾರ್ಜುನ ಬಾವಿಕಟ್ಟಿ, ವಸಂತ ಜೊಳ್ಳಿ, ಬಸವರಾಜ, ಶಂಕರ್ ಶಿರೇಕರ್ ಪವಾರ್ ಉಪಸ್ಥಿತರಿದ್ದರು.

# ಹರಳಹಳ್ಳಿ ಗ್ರಾಮಕ್ಕೆ ಸಂಪರ್ಕ ಸೇತುವೆ ನಿರ್ಮಿಸಲು ಕ್ರಮ: ಸಚಿವ ಭೈರತಿ ಬಸವರಾಜ





ಮಲೇಬೆನ್ನೂರು, ಮೇ 6- ಹರಹಳ್ಳಿಯಿಂದ ಹೊನ್ನಾಳಿ ತಾಲ್ಲೂಕು ಸಂಪರ್ಕಿಸುವ ಸಂಪರ್ಕ ಸೇತುವೆ ನಿರ್ಮಾಣಕ್ಕೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು ಎಂದು ನಗರಾಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಭರವಸೆ ನೀಡಿದರು.

ಇಲ್ಲಿಗೆ ಸಮೀಪದ ಹರಳಹಳ್ಳಿ ಗ್ರಾಮದಲ್ಲಿ ಗ್ರಾಮದ ಆದಿ ದೇವತೆ ಶ್ರೀ ದಂಡಿ ದುರ್ಗಾಂಬಿಕಾ ದೇವಿ ಹಾಗೂ ಶ್ರೀ ವರಸಿದ್ಧಿ ವಿನಾಯಕ ಮತ್ತು ಶ್ರೀ ದುರ್ಗಮ್ಮ ದೇವಿಯ ನೂತನ ಶಿಲಾ ಮೂರ್ತಿಗಳ ಪ್ರತಿಷ್ಠಾಪನೆ ಅಂಗವಾಗಿ ಇಂದು ಹಮ್ಮಿಕೊಂಡಿದ್ದ ಜನಜಾಗೃತಿ ಧಾರ್ಮಿಕ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಹರಳಹಳ್ಳಿಯಿಂದ ಯರೇಹಳ್ಳಿ-ಯರೇಚಿಕ್ಕನಹಳ್ಳಿ ಸಂಪರ್ಕಕ್ಕೆ ಹೊಸ ಸೇತುವೆಯನ್ನು ಹಳ್ಳಕ್ಕೆ ನಿರ್ಮಿಸುವಂತೆ ಈಗಾಗಲೇ 7 ಕೋಟಿ ರೂ. ವೆಚ್ಚದ ಯೋಜನೆ ಸಿದ್ದಪಡಿಸಿ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ತಿಳಿಸಿದರು.

ನನ್ನ ಅನುದಾನದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 1 ಕೊಠಡಿಯನ್ನು ನಿರ್ಮಿಸಿಕೊಡುತ್ತೇನೆಂದು ಸಿದ್ದೇಶ್ವರ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಸ್. ರಾಮಪ್ಪ ಮಾತನಾಡಿ, ದೇವಸ್ಥಾನಗಳು ಗ್ರಾಮಕ್ಕೆ ಕಳಸ ಇದ್ದಂತೆ. ಗ್ರಾಮದಲ್ಲಿ ದೇವಸ್ಥಾನ, ದೇವರುಗಳಿದ್ದರೆ ಜನರಿಗೆ ಭಯ, ಭಕ್ತಿ, ಭಾವಗಳು ಇರುತ್ತವೆ. ಜೊತೆಗೆ ಶಾಲೆಗಳೂ ಕೂಡಾ ಅಷ್ಟೇ ಮುಖ್ಯವಾಗಿವೆ.

ಈ ಶಾಲೆಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ನೀಡುತ್ತೇನೆಂದ ಶಾಸಕರು ಅನ್ಯಾಯ, ದೌರ್ಜನ್ಯ, ಅಧರ್ಮ ಬಹಳ ಕಾಲ ಉಳಿಯುವುದಿಲ್ಲ. ಧರ್ಮದ ಹಾದಿಯಲ್ಲಿ ನಡೆದರೆ ತಡವಾದರೂ ಯಶಸ್ಸು ಸಿಗುತ್ತದೆ ಎಂಬುದಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಮಾತನಾಡಿ, ಪ್ರತಿ ಗ್ರಾ.ಪಂ.ಗೆ ಭೇಟಿ ನೀಡಿ, ಪಂಚಾಯತ್ ರಾಜ್ ಇಲಾಖೆಯ ಸಮಸ್ಯೆಗಳನ್ನು ಬಗೆಹರಿಸುವ ಕೆಲಸವನ್ನು ಈಗಾಗಲೇ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಾರಂಭಿಸಿದ್ದೇನೆ. ಮುಂದಿನ ದಿನಗಳಲ್ಲಿ ದಾವಣಗೆರೆ ಜಿಲ್ಲೆಯ ಪ್ರತಿ ಗ್ರಾ.ಪಂ.ಗೂ ಭೇಟಿ ನೀಡುತ್ತೇನೆಂದು ತಿಳಿಸಿದರು.

ಮಾಜಿ ಶಾಸಕ ಬಿ.ಪಿ. ಹರೀಶ್, ಜಿ.ಪಂ. ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯರಾದ ಎಂ. ನಾಗೇಂದ್ರಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ ಮಾತನಾಡಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ನೀವು ಬೆಳೆದ ಬೆಳೆಗಳನ್ನು ಹೊಲದಲ್ಲೇ ಮಾರಾಟ ಮಾಡದೇ ಮನೆಗೆ ತಂದು ಪೂಜೆ ಮಾಡಿ ನಂತರ ಒಳ್ಳೆಯ ಧಾರಣೆ ಸಿಕ್ಕಾಗ ಮಾರಾಟ ಮಾಡಿ ಎಂದು ಕಿವಿಮಾತು ಹೇಳಿದರು.

ದೇವಸ್ಥಾನಗಳಲ್ಲಿ ಸ್ವಚ್ಛತೆ ಕಾಪಾಡಿ. ಮಲಗುವ ಅಭ್ಯಾಸ ಮಾಡಬೇಡಿ. ಇದರಿಂದ ಗ್ರಾಮಕ್ಕೆ ದರಿದ್ರ ಬರುತ್ತದೆ ಎಂದು ಶ್ರೀಗಳು ಎಚ್ಚರಿಸಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ತಾ. ಗ್ರಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಗ್ರಾ.ಪಂ. ಅಧ್ಯಕ್ಷೆ ಅನುಷಾ ನಾಗರಾಜ್, ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ತಾ.ಪಂ. ಇ.ಓ. ಗಂಗಾಧರಪ್ಪ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಪಿಡಿಓ ಶಾಂತಪ್ಪ, ಗ್ರಾಮದ ಕರಿಬಸಪ್ಪ, ಕೃಷ್ಣಪ್ಪ, ವಸಂತಪ್ಪ, ರಂಗನಾಥ್, ಕರಿಯಲ್ಲಮ್ಮ, ಗುತ್ತಿಗೆದಾರ ಮಲ್ಲನಾಯ್ಕನಹಳ್ಳಿ ಅಶೋಕ್, ಹಾಲಿವಾಣದ ಮೋಹನ್, ಉದ್ಯಮಿ ಎಂ.ಎಸ್. ಹೇಮಂತ್, ಮಲೇಬೆನ್ನೂರು ಪುರಸಭೆ ಸದಸ್ಯ ಬಿ. ಮಂಜುನಾಥ್ ಮತ್ತಿತರರು ಭಾಗವಹಿಸಿದ್ದರು.

ಗ್ರಾಮದ ಮುಖಂಡ ಗಣೇಶ ಮೂರ್ತಿ ಸ್ವಾಗತಿಸಿದರು. ಗ್ರಾ.ಪಂ. ಕಾರ್ಯದರ್ಶಿ ಜಯ್ಯಪ್ಪ ನಿರೂಪಿಸಿದರು.

# ದೃಷ್ಟಿಯನ್ನು ಕಳೆದುಕೊಂಡ ಮಗನ ಚಿಕಿತ್ಸೆಗೆ ತಂದೆಯ ಮನವಿ

ದಾವಣಗೆರೆ, ಮೇ 6 - ತಲೆಗೆ ಪೆಟ್ಟು ಬಿದ್ದು ದೃಷ್ಟಿ ಕಳೆದುಕೊಂಡ ಹಾಗೂ ಕಿವಿ ಮಂದವಾಗಿರುವ ಮಗನಿಗೆ ನೆರವಾಗುವಂತೆ ತಾಲ್ಲೂಕಿನ ಕನಗೊಂಡನಹಳ್ಳಿ ಗ್ರಾಮದ ವಿರೂಪಾಕ್ಷಪ್ಪ ಮನವಿ ಮಾಡಿಕೊಂಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಅವರು, ತಮ್ಮ ಮಗ ಪವನ್ ಏಳು ವರ್ಷದವನಾಗಿದ್ದಾಗ ಬಿದ್ದು ದೃಷ್ಟಿ ಕಳೆದುಕೊಂಡಿದ್ದ. ಆಸ್ಪತ್ರೆಗೆ ಅಲೆದಾಡಿದರೂ ಸಮಸ್ಯೆ ಬಗೆಹರಿದಿರಲಿಲ್ಲ. ಈಗ ನರ ದೌರ್ಬಲ್ಯಕ್ಕೆ ಚಿಕಿತ್ಸೆ ಕೊಡಿಸಿದರೆ ದೃಷ್ಟಿ ಸಿಗಲಿದೆ ಎಂದು ವೈದ್ಯರು ಹೇಳಿದ್ದಾರೆ.

ಇದಕ್ಕಾಗಿ 65 ಸಾವಿರ ರೂ.ಗಳು ವೆಚ್ಚವಾಗಲಿದ್ದು, ಬಡವರಾದ ತಮಗೆ ಈ ಹಣ ಭರಿಸುವ ಶಕ್ತಿ ಇಲ್ಲ ಎಂದಿದ್ದಾರೆ.

ಆರ್ಥಿಕ ಸಹಾಯ ಮಾಡಲು ಬಯಸುವವರು ಬ್ಯಾಂಕ್ ಖಾತೆ ಸಂಖ್ಯೆ : 520101213883631, ಐ.ಎಫ್.ಎಸ್.ಸಿ. ಕೋಡ್ : ಯುಬಿಐಎನ್0902942, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಹದಡಿ ಶಾಖೆ, ದಾವಣಗೆರೆ ಇಲ್ಲಿಗೆ ಹಣ ಜಮಾ ಮಾಡಬಹುದು ಎಂದವರು ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಬಾಲಕ ಪವನ್, ತಾಯಿ ವೀರಮ್ಮ ಉಪಸ್ಥಿತರಿದ್ದರು.



# ಎಲ್ಐಸಿ, ಧರ್ಮಸ್ಥಳ ಸಂಘದ ಸಹಾಯ ಹಸ್ತ ಶ್ಲಾಘನೀಯ




ಮಲೇಬೆನ್ನೂರು, ಮೇ 6- ಸಮಾಜ ಮತ್ತು ಕುಟುಂಬ ಸುಧಾರಣೆಯಲ್ಲಿ ಮಹಿಳೆಯರು ಮಹತ್ವದ ಪಾತ್ರ ವಹಿಸುತ್ತಿರುವ ಈ ಸಂದರ್ಭದಲ್ಲಿ ಜೀವ ವಿಮಾ ಸಂಸ್ಥೆ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಶೈಕ್ಷಣಿಕ ಸಂಸ್ಥೆಗಳನ್ನು ಗುರುತಿಸಿ ಅವರಿಗೆ ಸಹಾಯ ಹಸ್ತ ನೀಡುತ್ತಿರುವುದು ಶ್ಲಾಘನೀಯ ಎಂದು ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿನ ಅಜಾದ್ ನಗರದ ಹಬೀಬಿಯಾ ಮಹಿಳಾ ಅರೇಬಿಕ್ ಮದರಸಾ ಗೆ ಭಾರತೀಯ ಜೀವ ವಿಮಾ ಸಂಸ್ಥೆ ಹೆಚ್ಚು ವಿಮೆ ಮಾಡಿದ ಪ್ರದೇಶಗಳಿಗೆ ನೀಡುವ ಸೋಲಾರ್ ಉಪಕರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಎಲ್ಲಾ ವರ್ಗದ ಜನರನ್ನು ಸಮಾನವಾಗಿ ಕಾಣುತ್ತಿದೆ ಎಂಬುದಕ್ಕೆ ಇವರ ಈ ಕೊಡುಗೆ ಸಾಕ್ಷಿಯಾಗಿದೆ. ನಿಜಕ್ಕೂ ಈ ಸಂಸ್ಥೆಯಲ್ಲಿ ಬಡ ಹಾಗೂ ನಿರ್ಗತಿಕ ಮಹಿಳೆಯರಿಗೆ ಉಚಿತ ವಾಗಿ ವಸತಿ ಶಿಕ್ಷಣ ನೀಡಲಾಗುತ್ತಿದೆ. ಇಂತಹ ಸಂಸ್ಥೆಗಳಿಗೆ ಸಹಾಯ ಮಾಡಿದಾಗ ಆತ್ಮವಿಶ್ವಾಸ ಮೂಡುತ್ತದೆ. ಆಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವೆಂದು ನಂಬಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಬೆನ್ನೆಲುಬಾಗಿ ನಿಂತಿದೆ. ಸಾವಿರಾರು ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಂಡು ಕುಟುಂಬದ ಆರ್ಥಿಕತೆಗೆ ಹೆಗಲೊಡ್ಡಿದ್ದಾರೆ. ಅದಕ್ಕಾಗಿ ಇದರ ಸಂಸ್ಥಾಪಕರಾದ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರನ್ನು ಅಭಿನಂದಿಸಬೇಕು ಎಂದು ಅಬೀದ್ ಅಲಿ ಹೇಳಿದರು.

ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ವಿಮಾ ವಿಭಾಗದ ಮೇಲ್ವಿಚಾರಕ ಧರ್ಮೇಂದ್ರ ಮಾತನಾಡಿದರು.

ಸಂಸ್ಥೆಯ ಸ್ಥಳೀಯ ಸಂಚಾಲಕ ಪ್ರಕಾಶ್, ಸಂಸ್ಥೆಯ ಅಕ್ಷತ, ದಿಲ್ಶಾದ್ ಬಾನು, ಷಹತಾಜ್, ವಾಣಿ, ಅಲ್ ಹಬೀಬಿಯಾ ಸಂಸ್ಥೆಯ ಸೈಯದ್ ಮುಜಾಮಿಲ್ ಖಾದ್ರಿ, ಮುಖಂಡರಾದ ಫಕ್ರುದ್ದೀನ್ ಅಲಿ ಅಹ್ಮದ್, ಯಲವಟ್ಟಿ ಕೊಟ್ರೇಶ್ ನಾಯಕ್, ಸೈಯದ್ ಮನಫುಷ್ ಭಾಗವಹಿಸಿದ್ದರು.

ಮಲೇಬೆನ್ನೂರು ವಲಯದ ನಿರ್ಗಮಿತ ಮೇಲ್ವಿಚಾರಕ ಸಂತೋಷ್ ಸ್ವಾಗತಿಸಿದರು.

# ಗೆಳೆಯರ ಬಳಗದಿಂದ ಸೌಹಾರ್ದ ಕೂಟ



ದಾವಣಗೆರೆ, ಮೇ 6- ನಗರದ ರಾಜೀವ್ ಗಾಂಧಿ ಬಡಾವಣೆಯ 1ನೇ ಮುಖ್ಯ ರಸ್ತೆ, 3ನೇ ತಿರುವಿನ ಗೆಳೆಯರ ಬಳಗದ ವತಿಯಿಂದ ಬಸವ ಜಯಂತಿ ಮತ್ತು ರಂಜಾನ್ ಹಬ್ಬದ ಪ್ರಯುಕ್ತ ಸೌಹಾರ್ದ ಕೂಟ ನಡೆಸಲಾಯಿತು.

ಪಾಲಿಕೆ ಸದಸ್ಯರಾದ ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ಪಾಲಿಕೆಯ ವಿರೋಧ ಪಕ್ಷದ ನಾಯಕ ಗಡಿ ಗುಡಾಳ್ ಮಂಜುನಾಥ್, ಪಾಲಿಕೆ ಸದಸ್ಯರುಗಳಾದ ಎ. ನಾಗರಾಜ್, ಕೆ. ಚಮನ್ ಸಾಬ್, ವಿನಾಯಕ ಪೈಲ್ವಾನ್, ಉದಯಕುಮಾರ್, ನಗರಸಭಾ ಮಾಜಿ ಅಧ್ಯಕ್ಷರುಗಳಾದ ದಿನೇಶ್ ಕೆ. ಶೆಟ್ಟಿ, ಕೆ.ಜಿ. ಶಿವಕುಮಾರ್, ಮುಖಂಡ ಸುರೇಶ್ ಕೋಗುಂಡೆ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಗೆಳೆಯರ ಬಳಗದ ಅಧ್ಯಕ್ಷ ರಫೀಕ್, ಉಪಾಧ್ಯಕ್ಷ ನಾಗರಾಜ್, ಪ್ರಧಾನ ಕಾರ್ಯದರ್ಶಿ ಪಿ. ಮಂಜುನಾಥ್, ಸಹ ಕಾರ್ಯದರ್ಶಿಗಳಾದ ಆರೀಫ್, ಹೊನ್ನೂರಪ್ಪ, ಯೋಗೇಶ್, ಹಿರಿಯ ನಾಗರಿಕರಾದ ವೀರಾಚಾರಿ, ಡಾ. ವಿರುಪಾಕ್ಷಪ್ಪ ಅವರುಗಳನ್ನು ಸನ್ಮಾನಿಸಲಾಯಿತು.

# ಒಂದು ಬಂಧನ, ಮೂರು ರಾಜ್ಯಗಳ ಪೊಲೀಸರು

## ಬಿಜೆಪಿ ನಾಯಕ ತಾಜಿಂದರ್ ಸಿಂಗ್ ಬಗ್ಗಾ ಪ್ರಕರಣ ದಿನವಿಡೀ ಪಡೆದ ತಿರುವುಗಳು

ನವದೆಹಲಿ, ಮೇ 6 – ದೆಹಲಿಯ ಬಿಜೆಪಿ ನಾಯಕ ತಾಜಿಂದರ್ ಸಿಂಗ್ ಬಗ್ಗಾ ಅವರನ್ನು ಪಂಜಾಬ್ ಪೊಲೀಸರು ಅವರ ನಿವಾಸದಲ್ಲಿ ಬಂಧಿಸಿ ಪಂಜಾಬ್‌ಗೆ ಕರೆದುಕೊಂಡು ಹೋಗುವ ಪ್ರಯತ್ನದಲ್ಲಿರುವಾಗ ಹರಿಯಾಣ ಪೊಲೀಸರು ತಡೆದ ಮತ್ತು ದೆಹಲಿ ಪೊಲೀಸರು ಅವರನ್ನು ವಾಪಸ್ ದೆಹಲಿಗೆ ಕರೆದುಕೊಂಡ ಹೋದ ಬೆಳವಣಿಗೆಯಾಗಿದೆ.

ಶುಕ್ರವಾರ ನಡೆದ ನಾಟಕೀಯ ಬೆಳವಣಿಗೆಯಲ್ಲಿ ಮೂರು ರಾಜ್ಯಗಳ ಪೊಲೀಸರು ಬಂಧನ ಹಾಗೂ ವಾಪಸ್ ಕರೆ ತರುವಲ್ಲಿ ಭಾಗಿಯಾಗಿದ್ದರೆ. ಘಟನೆ ರಾಜಕೀಯ ಕೆಸರೆರಚಾಟಕ್ಕೂ ಕಾರಣವಾಗಿದೆ.

ಆಮ್ ಆದ್ಮಿ ಪಾರ್ಟಿ ನಾಯಕ ಹಾಗೂ ದೆಹಲಿ ಮುಖ್ಯಮಂತ್ರಿಯ ಕಟು ಟೀಕಾಕಾರ ರಾಗಿರುವ ಬಗ್ಗಾ ಅವರ ಬಂಧನವನ್ನು ಬಿಜೆಪಿ ತೀವ್ರವಾಗಿ ಆಕ್ಷೇಪಿಸಿದ್ದು, ಸೇಡಿನ ರಾಜಕೀಯ ನಡೆಸಲಾಗುತ್ತಿದೆ ಎಂದು ಆರೋಪಿಸಿದೆ. ಆರೋಪ ತಳ್ಳಿ ಹಾಕಿರುವ ಆಮ್ ಆದ್ಮಿ ಪಾರ್ಟಿ, ಬಗ್ಗಾ ಅವರು ಪಂಜಾಬ್‌ನಲ್ಲಿ ಕೋಮು ದ್ವೇಷ ಹರಡುತ್ತಿರುವ ಕಾರಣಕ್ಕಾಗಿ ಬಂಧಿಸಲಾಗಿದೆ ಎಂದು ಹೇಳಿದೆ.

ಬಗ್ಗಾ ತಂದೆ ಪ್ರೀತ್‌ಪಾಲ್ ಸಿಂಗ್ ನೀಡಿದ ದೂರನ್ನು ಆಧರಿಸಿ ದೆಹಲಿ ಪೊಲೀಸರು ಅಪಹರಣ ಪ್ರಕರಣ ದಾಖಲಿಸಿದ್ದಾರೆ. ಮತ್ತೊಂದೆಡೆ, ಹರಿಯಾಣದ ಕುರುಕ್ಷೇತ್ರದಲ್ಲಿ ತನ್ನ ಪೊಲೀಸರನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು ಎಂದು ಆರೋಪಿಸಿ ಪಂಜಾಬ್ ಸರ್ಕಾರ ಹೈಕೋರ್ಟ್ ಮೊರೆ ಹೋಗಿದೆ. ಆದರೆ, ತಾಜಿಂದರ್ ಸಿಂಗ್ ಬಗ್ಗಾರನ್ನು ಹರಿಯಾಣದಲ್ಲೇ ಇರಿಸಬೇಕು ಎಂಬ ಪಂಜಾಬ್ ಸರ್ಕಾರದ ಮನವಿಯನ್ನು ಹೈಕೋರ್ಟ್ ತಳ್ಳಿ ಹಾಕಿದೆ.

ದೆಹಲಿ ಹಾಗೂ ಪಂಜಾಬ್‌ಗಳಲ್ಲಿ ಆಮ್ ಆದ್ಮಿ ಪಾರ್ಟಿ ಸರ್ಕಾರ ಇದೆ. ಆದರೆ, ದೆಹಲಿ ಪೊಲೀಸರು ಕೇಂದ್ರ ಗೃಹ ಸಚಿವಾಲಯದಡಿ ಬರುತ್ತಾರೆ. ಹರಿಯಾಣದಲ್ಲಿ ಬಿಜೆಪಿ ಸರ್ಕಾರ ಇದೆ.

15-20 ಜನರ ಪಂಜಾಬ್ ಪೊಲೀಸ್ ತಂಡ ತಮ್ಮ ಮನೆಗೆ ಬೆಳಿಗ್ಗೆ 8ರ ಸಮಯದಲ್ಲಿ ನುಗ್ಗಿ ತನ್ನ ಮೇಲೆ ಹಲ್ಲೆ ನಡೆಸಿದೆ. ಬಂಧನದ ವೇಳೆ ಮಗ ಪೇಟ ಧರಿಸಲೂ ಬಿಟ್ಟಿಲ್ಲ ಎಂದು ಪ್ರೀತ್‌ಪಾಲ್ ಸಿಂಗ್ ದೂರಿದ್ದಾರೆ.

ಘಟನೆಯ ವಿಡಿಯೋ ಚಿತ್ರೀಕರಿಸುವ ಪ್ರಯತ್ನ ನಡೆಸಿದಾಗ ನನ್ನ ಮೊಬೈಲ್ ಫೋನ್ ಕಸಿದುಕೊಂಡಿದ್ದಾರೆ ಮತ್ತು ನನ್ನ ಮುಖಕ್ಕೆ ಭಾರಿಸಿ ಕುಳಿತುಕೊಳ್ಳುವಂತೆ ಮಾಡಿದರು ಎಂದು ಬಗ್ಗಾ ತಂದೆ ಹೇಳಿದ್ದಾರೆ.

ಬಗ್ಗಾ ಬಂಧನದ ನಂತರ ಪೊಲೀಸ್ ವಾಹನಗಳು ದೆಹಲಿಯಿಂದ ಪಂಜಾಬ್‌ನ ಮೊಹಾಲಿ ಕಡೆ ಹೊರಟಿದ್ದವು. ವಾಹನಗಳನ್ನು ಹರಿಯಾಣದ ಕುರುಕ್ಷೇತ್ರಗಳಲ್ಲಿ ತಡೆಯಲಾಯಿತು. ಬಗ್ಗಾರನ್ನು ಬಲವಂತವಾಗಿ ನಿವಾಸದಿಂದ ಕರೆದೊಯ್ಯಲಾಗಿದೆ ಎಂಬ ಮಾಹಿತಿ ಇತ್ತು. ಈ ಬಗ್ಗೆ ಪರಿಶೀಲಿಸಲು ಪೊಲೀಸರನ್ನು ತಡೆಯಲಾಗಿತ್ತು ಎಂದು ಹರಿಯಾಣದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ನಂತರ ದೆಹಲಿ ಪೊಲೀಸರ ತಂಡವೊಂದು ಕುರುಕ್ಷೇತ್ರಕ್ಕೆ ತೆರಳಿ ಬಗ್ಗಾರನ್ನು ವಶಕ್ಕೆ ಪಡೆದುಕೊಂಡಿತು.

ಪಂಜಾಬ್ ಪೊಲೀಸರು ಬಗ್ಗಾ ಬಂಧನದ ಬಗ್ಗೆ ದೆಹಲಿಯ ಸ್ಥಳೀಯ ಪೊಲೀಸರಿಗೆ ತಿಳಿಸಿರಲಿಲ್ಲ ಎಂದು ದೆಹಲಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ದೆಹಲಿ ಬಿಜೆಪಿ ನಾಯಕಿ ನೂಪುರ್ ಶರ್ಮ, ದೆಹಲಿ ಪೊಲೀಸರಿಗೆ ಮಾಹಿತಿ ನೀಡದೇ ಬಂಧಿಸಿರುವುದು ಅಕ್ರಮ ಎಂದಿದ್ದಾರೆ.

ಕೇಜ್ರಿವಾಲ್ ನಿವಾಸದ ಎದುರು ಮಾರ್ಚ್ 30ರಂದು ಬಿಜೆಪಿ ಪ್ರತಿಭಟನೆ ನಡೆಸಿತ್ತು. ಪ್ರತಿಭಟನೆಯಲ್ಲಿ ಬಗ್ಗಾ ಭಾಗಿಯಾಗಿದ್ದರು. 'ದಿ ಕಾಶ್ಮೀರ್ ಫೈಲ್ಸ್' ಕುರಿತು ಕೇಜ್ರಿವಾಲ್ ನೀಡಿದ ಹೇಳಿಕೆಯನ್ನು ಬಗ್ಗಾ ಖಂಡಿಸಿದ್ದರು. ಈ ವಿಷಯಗಳ ಬಗ್ಗೆ ಪಂಜಾಬ್ ಪೊಲೀಸರಲ್ಲಿ ದೂರು ದಾಖಲಿಸಲಾಗಿತ್ತು.

ಸಾಮಾಜಿಕ ಜಾಲತಾಣಗಳ ಮೂಲಕ ನೀಡಲಾದ ಹೇಳಿಕೆಗಳ ಬಗ್ಗೆ ಬಗ್ಗಾ ವಿರುದ್ಧ ಪ್ರಕರಣ ದಾಖಲಾಗಿದೆ. ಪಟಿಯಾಲದಲ್ಲಿ ನಡೆದ ಹಿಂಸಾಚಾರಕ್ಕೆ ಬಿಜೆಪಿಗೆ ಸಂಬಂಧಿಸಿದ ಹಲವರು ಕುಮ್ಮಕ್ಕು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪಂಜಾಬ್ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ ಎಂದು ಆಮ್ ಆದ್ಮಿ ಪಾರ್ಟಿ ವಕ್ತಾರ ಸೌರಭ್ ಭಾರದ್ವಾಜ್ ಹೇಳಿದ್ದಾರೆ.

ಈ ಬೆಳವಣಿಗೆಗಳ ಬಗ್ಗೆ ಹೇಳಿಕೆ ನೀಡಿರುವ ಪಂಜಾಬ್ ಪೊಲೀಸರು, ತನಿಖೆಗೆ ಬರಲು ನೋಟಿಸ್‌ಗಳನ್ನು ಕಳಿಸಲಾಗಿತ್ತು. ಇಷ್ಟಾದರೂ ಉದ್ದೇಶಪೂರ್ವಕವಾಗಿ ತನಿಖೆಗೆ ಹಾಜರಾಗಿಲ್ಲ. ಈ ಹಿನ್ನೆಲೆಯಲ್ಲಿ ಕಾನೂನು ಬದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

## ಮಹಿಳೆಯರಿಗೆ ಹೊಲಿಗೆ ತರಬೇತಿ

ದಾವಣಗೆರೆ, ಮೇ 6- ಹಳೇ ತೋಳಹುಣಸೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ಸಂಸ್ಥೆ, ರೇಷ್ಮೆ ಇಲಾಖೆ ಆವರಣದಲ್ಲಿ ಜಿಲ್ಲಾ ಪಂಚಾಯ್ತಿ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ 18 ರಿಂದ 45 ವಯೋಮಿತಿಯ ಗ್ರಾಮೀಣ ಮಟ್ಟದ ಮಹಿಳೆಯರಿಗಾಗಿ 30 ದಿನಗಳ ಮಹಿಳಾ ಹೊಲಿಗೆ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ.

ಆಸಕ್ತ ಅಭ್ಯರ್ಥಿಗಳು ಇದೇ ದಿನಾಂಕ 13ರಂದು ನೇರವಾಗಿ ಸಂಸ್ಥೆಗೆ ಭೇಟಿ ನೀಡಿ ಅಥವಾ 7975139332, 70199 80484, 9964111314, 9538395817, 94819 77076 ಸಂಪರ್ಕಿಸಬಹುದು.

# ವಿಶ್ವ ಮಲೇರಿಯಾ ದಿನಾಚರಣೆ ಪ್ರಯುಕ್ತ ಸೈಕಲ್ ಜಾಥಾ



ದಾವಣಗೆರೆ, ಮೇ 6- ವಿಶ್ವ ಮಲೇರಿಯಾ ದಿನಾಚರಣೆ ಪ್ರಯುಕ್ತ ವಿವಿಧ ಇಲಾಖೆಗಳ ಅಧಿಕಾರಿಗಳು ನಗರದ ಪ್ರಮುಖ ರಸ್ತೆಗಳಲ್ಲಿ ಸೈಕಲ್ ಜಾಥಾ ಮುಖೇನ ಮಲೇರಿಯಾ ಬಗ್ಗೆ ಜನಜಾಗೃತಿ ಮೂಡಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ ಹಾಗೂ ಎನ್ ವಿಬಿಡಿಸಿಪಿ ಇವುಗಳ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ಬೈಸಿಕಲ್ ಕ್ಲಬ್‌ನ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಈ ಜಾಥಾವನ್ನು ನಿಜಲಿಂಗಪ್ಪ ಬಡಾವಣೆಯಲ್ಲಿರುವ ರಿಂಗ್ ರಸ್ತೆಯ ಕ್ಲಾಕ್ ಟವರ್ ವೃತ್ತದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎ. ಚನ್ನಪ್ಪ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಚಾಲನೆ ನೀಡಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, ಜಿಲ್ಲಾ ಮಲೇರಿಯಾಧಿಕಾರಿ ಡಾ. ಕೆ. ನಟರಾಜ್, ನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಜಿಲ್ಲಾಸ್ಪತ್ರೆ ಅಧೀಕ್ಷಕ ಎಸ್. ಷಣ್ಮುಖಪ್ಪ ಮತ್ತು ಇತರರು ಜಾಥಾದಲ್ಲಿ ಭಾಗವಹಿಸಿದ್ದರು.

## ಶಾಲೆಗೆ ಬಡ ಹೆಣ್ಣು ಮಕ್ಕಳಿಗೆ ಪ್ರವೇಶ

ದಾವಣಗೆರೆ, ಮೇ 6- ನಗರದ 'ರಶ್ಮಿ' ಹೆಣ್ಣು ಮಕ್ಕಳ ಉಚಿತ ವಸತಿಯುತ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ 1 ರಿಂದ 9 ನೇ ತರಗತಿವರೆಗೆ ಓದ ಬಯಸುವ ಹೆಣ್ಣು ಮಕ್ಕಳಿಗೆ ಇದೇ ದಿನಾಂಕ 12 ರಂದು ಸಂದರ್ಶನ ನಡೆಯಲಿದೆ. ಅನಾಥ, ನಿರ್ಗತಿಕ, ಕಡುಬಡ ಹೆಣ್ಣು ಮಕ್ಕಳಿಗೆ ಮಾತ್ರ ಪ್ರವೇಶಾವ ಕಾಶವಿದೆ. ವಿವರಕ್ಕೆ ಸಂಪರ್ಕಿಸಿ : 7026908835, 9916362288.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
27ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ. ಶ್ರೀಮತಿ ಐಗೂರು ಚನ್ನಬಸಮ್ಮ ಮತ್ತು ದಿ. ಶ್ರೀ ಐಗೂರು ದೊಡ್ಡಬಸಪ್ಪ ಇವರ ಜ್ಞಾಪಕಾರ್ಥವಾಗಿ ಮಕ್ಕಳು : ಐಗೂರು ಚಂದ್ರಶೇಖರ್, ಐಗೂರು ಪ್ರಭಣ್ಣ ಕುಟುಂಬ ವರ್ಗದವರ ಸೇವಾರ್ಥ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟ್ ಮಾರಾಟಕ್ಕೆ(KHB)**
ಕರ್ನಾಟಕ ಹೌಸಿಂಗ್ ಬೋರ್ಡ್‌ನಲ್ಲಿ 30X40 (9X12 ಮೀಟರ್) (ಪಾರ್ಕ್ ಎದುರು) ದಾವಣಗೆರೆ ಮೊದಲನೆಯ ಭಾಗದಲ್ಲಿ
ಕಿರಣ್ ಬೂಸ್ನೂರ್
98440 63409
(ಕೇವಲ 19 ಲಕ್ಷಕ್ಕೆ)

**ಚಾಲ್ತಿ ಇರುವ ಬಂಗಾರದ ಅಂಗಡಿ ಬಾಡಿಗೆಗಿದೆ**
12x70 ಅಡಿ ಉದ್ದಗಲದ ಪೂರ್ಣ ಪ್ರಮಾಣದ ಸಿದ್ದವಾಗಿರುವ ಬೆಳ್ಳಿ ಬಂಗಾರದ ಅಂಗಡಿ ಜತೆಯಲ್ಲಿ ವ್ಯವಸ್ಥಿತ, ವಾಸಕ್ಕೆ ಮನೆ ಬಾಡಿಗೆಗೆ ಇದೆ. ಮಾಹಿತಿಗಾಗಿ ಸಂಪರ್ಕಿಸಿರಿ :
93419 69084

**ಬೇಲರ್ ದಾರ ದೊರೆಯುತ್ತದೆ**
ದಾವಣಗೆರೆಯ ಈರುಳ್ಳಿ ಮಾರುಕಟ್ಟೆ ರಸ್ತೆಯಲ್ಲಿರುವ ಅಕ್ಕಿ ಮಳಿಗೆ ಹಿಂಭಾಗದ
ಕುಶಾಲ್ ಎಂಟರ್ ಪ್ರೈಸಸ್
ಮಳಿಗೆ ಸಂಖ್ಯೆ 7 ರಲ್ಲಿ ಭತ್ತ, ರಾಗಿ, ಹುಲ್ಲು ಬಂಡಲ್ ಕಟ್ಟುವ ಬೇಲರ್ ದಾರ ದೊರೆಯುತ್ತದೆ.
ಸಂಪರ್ಕಿಸಿ : ಶಿವರಾಜ್ ಕುಂಕೋದ್
90081 22113

**3BHK ಫ್ಲಾಟ್ ಲೀಸ್‌ಗೆ ಇದೆ**
ವಿದ್ಯಾನಗರದ ಕೊನೆಯ ಬಸ್ ಸ್ಟಾಪ್ ಬಳಿ ಇರುವ ಅಪಾರ್ಟ್‌ಮೆಂಟ್‌ನಲ್ಲಿ.
95913 60143

**ಕುಕ್ಕುವಾಡದಲ್ಲಿ ಸೈಟ್ ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು ಕುಕ್ಕುವಾಡ ಗ್ರಾಮದ ಬಸ್ ನಿಲ್ದಾಣದ ಬಳಿ 50x100 ಅಳತೆಯ ಖಾಲಿ ನಿವೇಶನ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
ಮೊ. 79756-43955

**ಮನೆ ಮಾರಾಟಕ್ಕಿದೆ**
ದಾವಣಗೆರೆ ನಗರದ ಎಸ್. ನಿಜಲಿಂಗಪ್ಪ ಬಡಾವಣೆ, 1ನೇ ಕ್ರಾಸ್, ನ್ಯಾಷನಲ್ ಕಾನ್ವೆಂಟ್ ಹತ್ತಿರ, 30x40 ಅಳತೆಯುಳ್ಳ ಡ್ಯೂಪ್ಲೆಕ್ಸ್, ಸುಸಜ್ಜಿತವಾದ, ವಾಸ್ತುವುಳ್ಳ, ಪೂರ್ವ/ಉತ್ತರ ದಿಕ್ಕಿನ ಕಾರ್ನರ್ ಮನೆ ಮಾರಾಟಕ್ಕಿದೆ.
94487 27266, 94481 34340

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಲು ಹುಡುಗರು ಬೇಕಾಗಿದ್ದಾರೆ.
ತಕ್ಷಣ ಸಂಪರ್ಕಿಸಿ :
73491 56380

**ಬೇಕಾಗಿದ್ದಾರೆ**
ಮನೆ ಕೆಲಸ ಹಾಗೂ ಅಡುಗೆ ಮಾಡುವವರು ಬೇಕಾಗಿದ್ದಾರೆ.
ಸ್ಥಳ : ಎಸ್.ಎಸ್. ಲೇಔಟ್ 'ಎ' ಬ್ಲಾಕ್, ಗುರು ಕೊಟ್ಟೂರೇಶ್ವರ ಹೋಟೆಲ್ ಹತ್ತಿರ.
Contact
97417 77567

**ಬೇಕಾಗಿದ್ದಾರೆ**
ಶೋ ರೂಂನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಲು ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಸಂಬಳ : 10,000/-
Tel : 08192 261003, 99161 43003, 95352 43598

**ಬೇಕಾಗಿದ್ದಾರೆ**
SSLC/PUC ಆದ ಮಹಿಳೆಯರು ರ್‍ಯಾಕ್ ನಿಂದ ಸ್ಟಾಕ್ ತೆಗೆಯಲು ಹಾಗೂ ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಮಾಡುವ ಸಮಯ : ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**Wanted Teacher**
1) BA, B.Ed (Eng) - 1,
2) B.Sc, B.Ed (PCM) - 1,
3) BPEd / CPEd - 1, 4) NTC / D.Ed -2
Sri Siddeshwara Primary and High School,
17th Cross, Anjaneya Badavane, Davanagere.
Contact us :
98444 43374

**WANTED**
Accountant with minimum 1 year experience in Tally
KRUSHI TARPAULIN
P.B. Road, Davangere.
99011 55996

**ಬೇಕಾಗಿದ್ದಾರೆ**
ಅಟೆಂಡರ್ ಕೆಲಸಕ್ಕೆ ಡ್ರೈವಿಂಗ್ ಲೈಸೆನ್ಸ್ ಹೊಂದಿರುವ ಸ್ಥಳೀಯ ಯುವಕರು ಬೇಕಾಗಿದ್ದಾರೆ
ಅಂದನೂರು ಚಿಟ್ಸ್ (ರಿ)
ರಾಂ & ಕೋ ಸರ್ಕಲ್, ದಾವಣಗೆರೆ.

**ಮನೆ ಬಾಡಿಗೆಗಿದೆ**
2nd ಫ್ಲೋರ್ ನಲ್ಲಿ 1 BHK ಉತ್ತರ ದಿಕ್ಕಿನ ಹಾಗೂ ಬೋರ್-ಕಾರ್ಪೋರೇಷನ್ ನೀರಿನ ಸೌಲಭ್ಯವಿರವ ಮನೆ ಬಾಡಿಗೆಗಿದೆ.
# 651, ಶ್ರೀ ಕಟೀಲು, 6 ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ತರಳಬಾಳು ಸ್ಕೂಲ್ ಎದುರು, ದಾವಣಗೆರೆ.
70194 27951, 93410 14488

**ಬೇಕಾಗಿದ್ದಾರೆ**
ಅಕ್ಯೂಪಂಕ್ಚರ್ ಇಂಜೆಕ್ಷನ್ ಹಾಕಲು 10th ಪಾಸಾದ ಒಬ್ಬರು ಹೆಣ್ಣು ಮಗಳು ಬೇಕಾಗಿದ್ದಾರೆ.
(ಬೆಳಿಗ್ಗೆ ಮತ್ತು ಸಂಜೆ. 6,000 salary)
76767 50280

**2BHK House 1400 Sq.Ft For Lease**
And room with attached bath For Rent
1st Floor, Near 1st Bus-stop, Vidyanagar, Davanagere.
(Only Veg)
Call : 63615 93954

**Wanted**
Marketing people
Experienced field Marketing person with school Admission and census Experience Required.
Marketing executive - 2,
Salary Range (6,000 to 12,000)
Ph: 6361662669

**Required**
* 3 male candidates
Helpers required for vehicle.
Education qualification 10th or 12th pass.
91139 24513

**ತಕ್ಷಣ ಬೇಕಾಗಿದ್ದಾರೆ**
ಡಿ.ಟಿ.ಪಿ ಹಾಗೂ ಫೋಟೋ ಶಾಪ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು.
ಸಂಪರ್ಕಿಸಿ :
94728 29451

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಮ್ಯಾನುಯಲ್ ಬಿಲ್ ಬರೆಯಲು ಮತ್ತು ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ.
ಹರ್ಷ ಹಾರ್ಡ್ ವೇರ್ & ಪೈಂಟ್ಸ್
(Harsha Hardware & Paints)
ಸುಭಾಷ್ ರಸ್ತೆ, ಅಶೋಕ ಚಿತ್ರ ಮಂದಿರದ ಎದುರು ರೈಲ್ವೇ ಗೇಟ್ ಹತ್ತಿರ, ದಾವಣಗೆರೆ - 577 001

**ಹೊಸ ಮನೆ ಬಾಡಿಗೆಗೆ ಇದೆ**
ಶಿವಕುಮಾರ ಬಡಾವಣೆಯಲ್ಲಿ 2BHK ಮತ್ತು 1BHK ಹೊಸಮನೆ ಬಾಡಿಗೆಗೆ ಇದೆ.
Agent
95385 65909

**WANTED**
Security Guards, Language Preference: English & Kannada
Food facility available
Contact: Brancs India Tools (P) Ltd
Karur Industrial Area Davnagere
97395 65940, 80738 15538

**LEWA**
Proffessional Makeup Artist Course & Beauty Courses Conducting here
Contact No :
81971 79414, 78924 68118

**ಮನೆ ಬಾಡಿಗೆಗೆ ಇದೆ**
ಡಬಲ್ ಬೆಡ್ ರೂಂ ಹೌಸ್, ಬೋರ್ ಹಾಗೂ ಮುನ್ಸಿಪಲ್ ನೀರಿನ ಸೌಲಭ್ಯವಿದೆ. ಶ್ರೀಶೈಲ ನಿಲಯ ಡೋ. ನಂ. 5686/16 ಎಸ್.ಎಸ್. ಲೇಔಟ್ 'ಎ' ಬ್ಲಾಕ್, 16 ನೇ ಮೇನ್, 3ನೇ ಕ್ರಾಸ್ ಹತ್ತಿರ, ಇಂಡೋರ್ ಸ್ಟೇಡಿಯಂ, ಕುಂದುವಾಡ ಕೆರೆ, ದಾವಣಗೆರೆ.
M : 94803 42773
ಸಸ್ಯಹಾರಿಗಳಿಗೆ ಮಾತ್ರ

**ಬೇಕಾಗಿದ್ದಾರೆ**
ಆನಗೋಡು ಸಮೀಪವಿರುವ BPCL ಪೆಟ್ರೋಲ್ ಬಂಕಿನ ಟ್ಯಾಂಕರ್ ಲಾರಿಗೆ ಕ್ಲೀನರ್ ಬೇಕಾಗಿದ್ದಾರೆ.
ಸಂಪರ್ಕಿಸಿ : 99001 42052

**ಶ್ರೀ ಮಾತಾ ಟ್ರಸ್ಟ್**
ಶಾಸ್ತ್ರೀಹಳ್ಳಿ ತುಂಬಿಗೆರೆ ಪೋಸ್ಟ್, ದಾವಣಗೆರೆ (ಜಿ). ಈ ಮೇಲ್ಕಂಡ ಸಂಸ್ಥೆಯನ್ನು ನಡೆಸಿಕೊಂಡು ಹೋಗಲು ಮ್ಯಾನೇಜರ್ ಕೆಲಸ್ಕೆ ಬೇಕಾಗಿದ್ದಾರೆ. ರಿಟೈರ್ಡ್ ಆದವರಿಗೆ ಆದ್ಯತೆ ಕೊಡಲಾಗುವುದು.
97319 93770, 9900142052

**ಬೇಕಾಗಿದ್ದಾರೆ**
ಗಿಫ್ಟ್ ಶಾಪ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ
ರುಚಿ ಕಲೆಕ್ಷನ್
ಮಂಡಿಪೇಟೆ, ದಾವಣಗೆರೆ.
98454 56818

**ಬೇಕಾಗಿದ್ದಾರೆ**
ಗಾರ್ಮೆಂಟ್ಸ್‌ಗೆ ಕೆಲಸ ಮಾಡಲು ಅನುಭವವುಳ್ಳ ಟೈಲರ್ಸ್, ಪೀಸ್ ವರ್ಕ್ ಹಾಗೂ ಕೆಲಸ ಮಾಡಲು ಬೇಕಾಗಿದ್ದಾರೆ.
98863 79790

**ಸೈಟ್ ಮಾರಾಟಕ್ಕೆ ಇದೆ**
ಮಹಾಲಕ್ಷ್ಮಿ ಲೇಔಟ್, ಶಿವಗಂಗೆ ಕಲ್ಯಾಣ ಮಂಟಪದ ಹಿಂಭಾಗ 41x92 ದಕ್ಷಿಣ ಸೈಟ್ ಮಾರಾಟಕ್ಕಿದೆ.
98448 82366

**Sandeep Rexine House**
Sofa Set Exchange Offer
Metal Sofa, Wooden Sofa, Leather Sofa,
All Types Sofas, A.V.K College Road, Near P.J Hotel.
Sudeep S.Hiremath
98860 26813

**Required**
Industrial Godown with 20 HP Power
Contact :
98452 63579

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು
Swapna Cushion Work
Behind Vittal Temple, Maharaj Pet, Davanagere
98445 81966

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಪಾಳೆಯಕ್ಕೆ ರೂಂ ಬಾಯ್ ಮತ್ತು ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ :
63639 54459

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಕೃಷ್ಣ ಫ್ಲೆಕ್ಸ್ ಎಂಟರ್ ಪ್ರೈಸಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಹಳೇ ಬಸ್ ನಿಲ್ದಾಣದ ಎದುರು, ಪಿ.ಬಿ ರಸ್ತೆ, ದಾವಣಗೆರೆ.
96117 71970

**ಶ್ರೀ ಮಾತಾ ಟ್ರಸ್ಟ್**
ಶಾಸ್ತ್ರೀಹಳ್ಳಿ, ತುಂಬಿಗೆರೆ ಪೋಸ್ಟ್, ದಾವಣಗೆರೆ. ಈ ಮೇಲ್ಕಂಡ ವೃದ್ಧಾಶ್ರಮದಲ್ಲಿ ಅಡುಗೆ ಮಾಡಲು ಅನುಭವವುಳ್ಳವರು ಬೇಕಾಗಿದ್ದಾರೆ.
97319 93770, 99001 42052

**ಬೇಕಾಗಿದ್ದಾರೆ**
ಅಡಿಕೆ ತೋಟದ ಅನುಭವ ಇರುವ ಕುಟುಂಬ ಬೇಕಾಗಿದ್ದಾರೆ.
ಇಚ್ಚೆ ಇರುವವರು ಸಂಪರ್ಕಿಸಿ :
M : 99002 65653

**GNM , B.Sc Nursing**
ಅಥವಾ ಜೆಓಸಿ ಆದವರು ಹೋಂ ಕೇರ್ ಸರ್ವೀಸ್‌ನಲ್ಲಿ ಕೆಲಸ ಮಾಡಲು ಆಸಕ್ತಿ ಇರುವವರು ಸಂಪರ್ಕಿಸಿ :
97415 62814

**ಶುದ್ಧ ಕ್ರಯಪತ್ರ ಕಳೆದಿದೆ**
ನಿವೇಶನದ ಶುದ್ಧ ಕ್ರಯ ಪತ್ರ ನಂ. DVG-1-16595-2018-19 ಮೂಲ ಪ್ರತಿ ದಾವಣಗೆರೆಯಲ್ಲಿ ಕಳೆದುಕೊಡಿರುತ್ತೇನೆ. ಸಿಕ್ಕಿದವರು ದಯಮಾಡಿ ಸಂಬಂಧಪಟ್ಟ ದಾವಣಗೆರೆ ಎಕ್ಸಟೆನ್ಷನ್ ಪೊಲೀಸ್ ಠಾಣೆಯಲ್ಲಿ ತಲುಪಿಸಿ, ಇಲ್ಲವಾದಲ್ಲಿ ನನ್ನ ಮೊಬೈಲ್ ನಂ. ಸಂಪರ್ಕ ಮಾಡಿ.
72042 29726

**WANTED TEACHERS**
+ P.E. (Master) - 1
+ Computer (Teacher) - 2
+ CBZ Science (Teacher) -1
+ M.A., B.Ed. (English)Teacher - 1
HMS CONVENT
Hirematha Kaipete, Davangere.
98441 61962, 98442 73736

**WANTED LADY TEACHERS**
B.Ed - 3 Posts, D.ED - 3 Posts.
NTC or Any Degree - 3 Posts
Contact : Vidya Vikas Convent
Behind Aarykae Hospital, K.T.J Nagar, Davanagere.
M : 99866 17235

**TO-LET**
Commercial Space 2400 Sft for Rent G+1 with 80ft road facing, near RTO office on Kondajji Main road. available in different size suitable for Hotel/Bank/ATM/Supermarket/ Showroom/Poly clinic/Office/Parlour/ GYM/Studio/Yoga Centre etc.
99864 52968

**WANTED**
Accountant, Network Engineer, In Premise/Field Technician, Sales Manager/ Executives, HR, Computer and Office Job. Software Tester and Developer
98444 92888

**MBA, EARN UNLIMITED**
Unlock Career Opprunities
Choose Really what matters
Get yes EVERYTIME
Education Tool provided.
Contact me In person 6 PM to 8 PM
Whatsapp 94487 29058

**ಜಾಗ ಬಾಡಿಗೆಗೆ ಇದೆ**
20x100 ಅಳತೆಯ 15 HP Power Supply ಇರುವ ಜಾಗ ಕೈಗಾರಿಕಾ ಉಪಯೋಗಕ್ಕೆ ಬಾಡಿಗೆಗೆ ಇದೆ. ಪಿ.ಬಿ. ರೋಡ್, ಹುಂಡೈ ಶೋರೂಂ ಪಕ್ಕ ಆವರಗೆರೆ, ಪೂನಾ-ಬೆಂಗಳೂರು ರೋಡ್.
72045 77823

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಪಾನಿಪುರಿ, ಮಸಾಲಾ ಪುರಿ**
ಮಾಡಲು ಅನುಭವ ಇರುವವರು ಕೂಡಲೇ ಬೇಕಾಗಿದ್ದಾರೆ.
ಸಂಬಳ : 15,000
M : 97427 19613

**REQUIRED**
We need lady manager for saloon
Qualification : Any degree
Languages :English, Hindi, Kannada
99724 76950, 89510 66905

**New Commercial Building For Rent**
3 Floor Commercial Building at Chowkipete (Beside Gowdara Jayadevappa Cloth Shop) each floor 1000 sq.ft Total 3000 sq.ft. (3 floors)
98441 41049, 98440 64712

**OFFICE SPACE FOR RENT**
860 sqft Suitable for Banks and Corporates
Shamanur Road
89262 68989

**ಶಾಲೆ ಮಾರಾಟಕ್ಕಿದೆ**
1995 ರಲ್ಲಿ ಪ್ರಾರಂಭವಾಗಿದ್ದು ಹಾಗೂ ಅನುದಾನಕ್ಕೆ ಒಳಪಡಲಿರುವ 1ರಿಂದ 5 ನೇ ತರಗತಿಯವರೆಗೆ ನಡೆಯುತ್ತಿರುವ ಶ್ರೀ ಭವಾನಿ ವಿದ್ಯಾ ಸಂಸ್ಥೆಯ ಶಾಲೆಯು ಮಾರಾಟಕ್ಕಿದೆ. ಕೊಂಡಜ್ಜಿ ರಸ್ತೆ, ಹೊಸ ಆರ್.ಟಿ.ಓ ಕಚೇರಿ ಎದುರು, ದಾವಣಗೆರೆ.
99804 55550, 88849 66770
90085 26469

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**WANTED**
Customer Relationship Manager (CRM)
- Excellent Interpersonal communication skills.
- Proficient in all Microsoft applications.
- Superior product knowledge.
- A team player with leadership skills.
- Maintain a positive attitude focused on customer satisfaction.

(Male Candidates Only)
Age Limit : Below 45
Note: Experience Candidates Only
Good Salary (ESI,PF + Incentive)
SRINIVASA HONDA
Ph No : 9916631266

**NEET K-CET**
CRASH COURSE
Class Timing 10am to 4-30pm | From 11-05-2022
SAMRUDDHI ACADEMY
DAVANGERE
6364640296

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 90080 67049

**TUTION**
For 1st PU & 2nd PU Students
Chemistry Tution Available.
By Retd,Prof. U. Guruswamy
# 5183, Nisarga, 10th cross, MCC B Block.
contact no
99720 66772

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WORK FROM HOME**
Male/Female, Full / Part time
Hand writing work. Small Letter to Capital Letter
Earn Per month 12,000/- to 15,000/-
89718 52431

# ಬಸವಣ್ಣನವರ ಪ್ರತಿ ವಚನವೂ ಬಂಗಾರ



ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತ್ಯೋತ್ಸವ ಹಾಗೂ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಶ್ರೀಮತಿ ಜಸ್ಪಿನ್ ಡಿ'ಸೌಜ

ದಾವಣಗೆರೆ, ಮೇ 6- ಅಕ್ಷಯ ತೃತೀಯ ದಿನದಂದು ಮಹಿಳೆಯರು ಬಂಗಾರ ಕೊಳ್ಳಲು ಹೆಚ್ಚು ಉತ್ಸುಕತೆ ಹೊಂದಿರುತ್ತಾರೆ. ಆದರೆ ಬಸವಣ್ಣನವರ ಪ್ರತಿ ವಚನವೂ ಬಂಗಾರವಿದ್ದಂತೆ. ಅವುಗಳನ್ನು ನಿತ್ಯವೂ ಕೇಳುತ್ತಾ, ಅವುಗಳಲ್ಲಿನ ಸಾರವನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಬಾಳೇ ಬಂಗಾರವಾಗುತ್ತದೆ ಎಂದು ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಜಸ್ಪಿನ್ ಡಿ'ಸೌಜ ಹೇಳಿದರು.

ನಗರದ ಬಸವ ಕೇಂದ್ರ, ವಿರಕ್ತ ಮಠ - ಶಿವಯೋಗಾಶ್ರಮ, ಕರ್ನಾಟಕ ವಚನ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಸ್ಫೂರ್ತಿ ಪ್ರಕಾಶನ ತೆಲಿಗಿ, ನಿಟ್ಟೂರು ಬಜ್ಜಿ ಹನುಮಂತಪ್ಪ ಚಾರಿಟೇಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಶಿವಯೋಗಾಶ್ರಮದಲ್ಲಿ ಮೊನ್ನೆ ಹಮ್ಮಿಕೊಳ್ಳಲಾಗಿದ್ದ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತ್ಯೋತ್ಸವ ಹಾಗೂ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಜಗಜ್ಯೋತಿ ಬಸವಣ್ಣನವರು ಹನ್ನೆರಡನೇ ಶತಮಾನದಲ್ಲಿಯೇ ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ಆದರೆ ಇಂದು ಕಾಯಕ ತತ್ವ ಮೂಲೆ ಗುಂಪಾಗುತ್ತಿದೆ. ಬಸವಣ್ಣನವರ ವಚನಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ನುಡಿದರು.

ಸಮಾನತೆಯ ಹರಿಕಾರ ಬಸವಣ್ಣ, ಜ್ಞಾನ ದಾಸೋಹ, ಅನ್ನದಾಸೋಹಕ್ಕೆ ಮಹತ್ವ ನೀಡಿದ್ದರು. ಇಂದು ವೀರಶೈವ ಮಠಗಳು ನೀಡುತ್ತಿರುವ ದಾಸೋಹ ವ್ಯವಸ್ಥೆಯನ್ನು ವಿಶ್ವವೇ ಬೆರಗುಗಣ್ಣುಗಳಿಂದ ನೋಡುತ್ತಿದೆ ಎಂದರು.


ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಬಸವೇಶ್ವರ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಿ.ಜಿ. ಅಜಯ್ ಕುಮಾರ್, ಬಸವಣ್ಣನವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಇರುವಷ್ಟು ದಿನ ಒಳ್ಳೆಯ ಕೆಲಸಗಳನ್ನು ಮಾಡಿ ಹೋಗಬೇಕು ಎಂದರು.

ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಜಿ.ಹೆಚ್. ರಾಜಶೇಖರ ಗುಂಡಗಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ಸಾಹಿತಿ ಜಯಮ್ಮ ನೀಲಗುಂದ, ಸ್ಫೂರ್ತಿ ಪ್ರಕಾಶನ ತೆಲಿಗಿ ಅಧ್ಯಕ್ಷ ಎಂ.ಬಸವರಾಜ್, ನಿಟ್ಟೂರು ಬಜ್ಜಿ ಹನುಮಂತಪ್ಪ ಚಾರಿಟೆಬಲ್ ಟ್ರಸ್ಟ್ ಕಾರ್ಯಾಧ್ಯಕ್ಷ ಮಹಾಂತೇಶ್ ನಿಟ್ಟೂರು, ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಉಪಸ್ಥಿತರಿದ್ದರು.

ಎಸ್.ಉಮಾದೇವಿ ಪ್ರಾರ್ಥಿಸಿದರು. ಕೆ.ಎಸ್. ವೀರಭದ್ರಪ್ಪ ತೆಲಿಗಿ ಸ್ವಾಗತಿಸಿದರು. ಅಣಬೇರು ತಾರೇಶ್ ಕೆ.ಪಿ. ನಿರೂಪಿಸಿದರು. ಎಸ್.ಓಂಕಾರಯ್ಯ ತವನಿಧಿ ವಂದಿಸಿದರು.

# 14ರಂದು ಬಿಜೆಪಿ ಪ್ರಕೋಷ್ಠಗಳ ಸಮಾವೇಶ



ದಾವಣಗೆರೆ, ಮೇ 6- ಬಿಜೆಪಿ ಪ್ರಕೋಷ್ಠಗಳ ಜಿಲ್ಲಾ ಸಮಾವೇಶವು ಇದೇ ದಿನಾಂಕ 14ರ ಶನಿವಾರ ಬೆಳಿಗ್ಗೆ 10.30ಕ್ಕೆ ನಗರದ ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕರೂ ಆದ ಪ್ರಕೋಷ್ಠಗಳ ರಾಜ್ಯ ಸಹ ಸಂಯೋಜಕ ಎ. ಹೆಚ್. ಶಿವಯೋಗಿಸ್ವಾಮಿ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಇಂಧನ ಸಚಿವ ಸುನಿಲ್ ಕುಮಾರ್ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಸಮಾವೇಶದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಎಸ್. ಎ. ರವೀಂದ್ರನಾಥ್, ಎಂ. ಪಿ. ರೇಣುಕಾಚಾರ್ಯ, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಎನ್.ಲಿಂಗಣ್ಣ, ಪರಿಷತ್ ಸದಸ್ಯ ಹಾಗೂ ರಾಜ್ಯ ಕಾರ್ಯದರ್ಶಿ ಕೆ.ಎಸ್. ನವೀನ್, ರಾಜ್ಯ ಕಾರ್ಯದರ್ಶಿ ಸುಧಾ ಜಯರುದ್ರೇಶ್, ಶಿಕ್ಷಕರ ಪ್ರಕೋಷ್ಠದ ರಾಜ್ಯ ಸಹ ಸಂಚಾಲಕ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ. ಸುರೇಶ್ ಮತ್ತಿತರರು ಭಾಗವಹಿಸಲಿದ್ದಾರೆ. ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವುದು, ಪ್ರತಿಭಾವಂತ ಪ್ರಭಾವಿ ವ್ಯಕ್ತಿಗಳನ್ನು ಸಂಘಟನೆಗೆ ಜೋಡಿಸುವುದು ಹಾಗೂ ಮುಂದಿನ ವರ್ಷದ ರಾಜ್ಯ ಚುನಾವಣೆಯಲ್ಲಿ ಬಿಜೆಪಿಯನ್ನು ಪೂರ್ಣ ಬಹುಮತದಿಂದ ಅಧಿಕಾರಕ್ಕೆ ತರುವುದು ಪ್ರಕೋಷ್ಠಗಳ ಉದ್ದೇಶ ಎಂದವರು ತಿಳಿಸಿದರು.

ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಆರೋಪ ಎದುರಿಸುತ್ತಿರುವವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಿವಯೋಗಿಸ್ವಾಮಿ, ರಾಜಕೀಯ ನಿಂತ ನೀರಲ್ಲ, ಇಂದಿನ ಪರಿಸ್ಥಿತಿ ಪರಿಗಣಿಸಲಾಗುತ್ತದೆ. ಆದರೆ, ಕಾರ್ಯಕರ್ತರಿಗೆ ಅನ್ಯಾಯ ಆಗಲ್ಲ. ಕಾನೂನು ರೀತಿಯ ಕ್ರಮಗಳಿದ್ದರೆ ಮುಂದುವರೆಯಲಿವೆ ಎಂದರು.

ದಾವಣಗೆರೆಗೆ ಸಚಿವ ಸ್ಥಾನ ಕೇಳುತ್ತಾ ಬಂದಿದ್ದೇವೆ. ಈ ಬಾರಿಯೂ ಕೇಳಿದ್ದೇವೆ, ಪಕ್ಷ ತೀರ್ಮಾನ ತೆಗೆದುಕೊಳ್ಳಲಿದೆ ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ನಗರ ಪಾಲಿಕೆ ಉಪ ಚುನಾವಣೆ ಅಭ್ಯರ್ಥಿಗಳ ಕುರಿತು ಎರಡು ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು. ಎರಡೂ ವಾರ್ಡ್‌ಗಳಲ್ಲಿ ಬಿಜೆಪಿ ಗೆಲ್ಲಲಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದೂಡಾ ಅಧ್ಯಕ್ಷ ಕೆ. ಎಂ. ಸುರೇಶ್, ಬಿಜೆಪಿ ಮುಖಂಡರಾದ ಡಿ.ಎಸ್. ಶಿವಶಂಕರ್, ಬಿ.ಎಸ್. ಜಗದೀಶ್, ಶ್ರೀನಿವಾಸ ದಾಸಕರಿಯಪ್ಪ, ಶಿವರಾಜ ಪಾಟೀಲ್, ದುರುಗೇಶ್, ದೂಡಾ ಸದಸ್ಯ ಆರ್. ಲಕ್ಷ್ಮಣ್, ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

## ದಾವಿವಿ ಕುಲಸಚಿವರಾಗಿ ಸರೋಜಾ

(1ನೇ ಪುಟದಿಂದ) ಸಂದರ್ಭದಲ್ಲಿ ಹಂಗಾಮಿ ಕುಲಪತಿ ಪ್ರೊ. ಪಿ. ಲಕ್ಷ್ಮಣ, ಪರೀಕ್ಷಾಂಗ ಕುಲಸಚಿವೆ ಪ್ರೊ. ಎಚ್. ಎಸ್.ಅನಿತಾ, ಹಣಕಾಸು ಅಧಿಕಾರಿ ಡಿ. ಪ್ರಿಯಾಂಕ ಮತ್ತು ಇತರರು ನೂತನ ಕುಲಸಚಿವರನ್ನು ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ಸರೋಜಾ ಅವರನ್ನು ದಾವಣಗೆರೆ ವಿ.ವಿ. ಪ್ರಾಧ್ಯಾಪಕರ ಸಂಘದ ವತಿಯಿಂದ ಅಧ್ಯಕ್ಷ ಡಾ. ಎಚ್.ವಿಶ್ವನಾಥ, ಪ್ರಧಾನ ಕಾರ್ಯದರ್ಶಿ ಪ್ರೊ. ಜೆ.ಕೆ.ರಾಜು, ಉಪಾಧ್ಯಕ್ಷರಾದ ಪ್ರೊ. ಗೋಪಿನಾಥ, ಪ್ರೊ. ರವಿಕುಮಾರ ಪಾಟೀಲ, ಪ್ರೊ. ಮಹಾಬಲೇಶ್ವರ, ಡಾ. ಲೋಕೇಶ್, ಡಾ. ಸುನೀತಾ, ಡಾ. ಶಿವಲಿಂಗಪ್ಪ, ಡಾ. ಮಲ್ಲಿಕಾರ್ಜುನ, ಡಾ. ಆಸೀಫ್ ಉಲ್ಲಾ ಮತ್ತಿತರರು ಅಭಿನಂದಿಸಿದರು.

# 2023ಕ್ಕೆ ಜೆಡಿಎಸ್ ಅಧಿಕಾರಕ್ಕೆ ಶಿವಶಂಕರ್ ವಿಶ್ವಾಸ



ಮಲೇಬೆನ್ನೂರು, ಮೇ 6- 2023ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಹೇಳಿದರು.

ಅವರು ಗುರುವಾರ ಜಿಗಳಿ ಗ್ರಾಮದ ಶ್ರೀ ಮಹೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಜೆಡಿಎಸ್ ಮುಖಂಡರ ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಜನರಿಂದ ಹಿಡಿಶಾಪಕ್ಕೆ ಒಳಗಾಗಿದೆ. ಕಾಂಗ್ರೆಸ್ ನಾಯಕತ್ವ ಕಿತ್ತಾಟದಲ್ಲಿದ್ದು, ಜೆಡಿಎಸ್ ಮಾತ್ರ ಯಾವುದೇ ಗೊಂದಲ ಮತ್ತು ಕಪ್ಪು ಚುಕ್ಕೆ ಇಲ್ಲದ ಕನ್ನಡ ನಾಡಿನ ಹೆಮ್ಮೆಯ ಪಕ್ಷವಾಗಿದೆ.

ಹರಿಹರ ಕ್ಷೇತ್ರದಲ್ಲಿ ಎಷ್ಟೇ ಅಭ್ಯರ್ಥಿಗಳಾದರೂ ಜನ ಈಗಾಗಲೇ ತೀರ್ಮಾನಿಸಿದ್ದು, ನನ್ನ ಗೆಲುವು ಸೂರ್ಯನಷ್ಟೇ ಸತ್ಯ ಎಂದು ಶಿವಶಂಕರ್ ವಿಶ್ವಾಸ ವ್ಯಕ್ತಪಡಿಸಿದರು. ಹರಿಹರದಲ್ಲಿ ನಾಳೆ ದಿನಾಂಕ 7ರ ಶನಿವಾರ ಹಮ್ಮಿಕೊಂಡಿರುವ 'ಜನತಾ ಜಲಧಾರೆ' ಕಾರ್ಯಕ್ರಮಕ್ಕೆ ಹೆಚ್ಚಿನ ಜನ ಭಾಗವಹಿಸಿ, ನಾಡಿನ ನದಿಗಳ ನೀರಿನ ಸದ್ಬಳಕೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಆಗ್ರಹಿಸೋಣ ಎಂದು ಶಿವಶಂಕರ್ ಮನವಿ ಮಾಡಿದರು.

ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ತಾ. ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ಸಿರಿಗೆರೆ ಪರಮೇಶ್ವರಗೌಡ, ಗ್ರಾಮದ ಮುಖಂಡರಾದ ಗೌಡ್ರ ಬಸವರಾಜಪ್ಪ, ಕೆ.ಆರ್. ರಂಗಪ್ಪ, ಡಾ.ಎನ್.ನಾಗರಾಜ್, ಎಕ್ಕೆಗೊಂದಿ ರುದ್ರಗೌಡ, ಎಂ.ಪಿ.ಜಯಣ್ಣ, ಕೆ.ಷಣ್ಮುಖಪ್ಪ, ಜಿ. ಹೆಚ್.ಮಂಜುನಾಥ್, ಎನ್.ಜಗದೀಶ್, ಪಿ. ಬಸವರಾಜ್, ಕೆ.ಆರ್.ಸಿದ್ದವೀರಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

# ಸಮಾಜವನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನ



(1ನೇ ಪುಟದಿಂದ) ಕೆಲಸ ಕಷ್ಟ ಸಾಧ್ಯವಾಗಿದೆ. ಕೆಲವು ಒಳಪಂಗಡವರು 2 ಎ ಮೀಸಲಾತಿ ಕೊಡಿ ಎಂದು ಹೋರಾಟ ಮಾಡುತ್ತಿದ್ದಾರೆ. ವೀರಶೈವ ಸಮಾಜವನ್ನು ಒಡೆಯುವ ಮೂಲಕ ಸಮಾಜವನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವೀರಶೈವ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನಿ ಶಿವಕುಮಾರ್ ನೇತೃತ್ವದಲ್ಲಿ ಸಂಘಟನಾತ್ಮಕ ಕೆಲಸವನ್ನು ನಿರ್ವಹಿಸುತ್ತಿದ್ದು, ಮಹಿಳಾ ಘಟಕ, ಯುವ ಘಟಕ, ನಗರ ಘಟಕಗಳು ಸಮಾಜ ಕಟ್ಟುವ ಕೆಲಸದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ಅತೀವ ಸಂತೋಷವನ್ನು ಉಂಟು ಮಾಡಿದೆ ಎಂದು ಹೇಳಿದರು.

ಲಿಂಗಪೂಜೆ ಮಾಡುವ ಪ್ರತಿಯೊಬ್ಬರೂ ಸಹ ಲಿಂಗವಂತರೇ, ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಎಂಬ ಭಾವನೆ ತಮ್ಮದು. ಇದನ್ನು ಅರಿತು ಎಲ್ಲರೂ ಒಂದಾಗಬೇಕಾದ ಅಗತ್ಯವಿದೆ ಎಂದರು. 12 ನೇ ಶತಮಾನದಲ್ಲಿಯೇ ಮಹಿಳಾ ಸ್ವಾತಂತ್ರ್ಯ ನೀಡಿದ ಮಹಾನ್ ಪುರುಷ ಬಸವಣ್ಣ. ಲಿಂಗಾಯತ ಧರ್ಮ ಪ್ರಾರಂಭ ಮಾಡಿ ಇಡೀ ಪ್ರಪಂಚಕ್ಕೆ ಮಾದರಿಯಾಗಿದ್ದಾರೆ. ಬಸವ ತತ್ವಗಳು ವಿಶ್ವದ ಎಲ್ಲೆಡೆ ಪಸರಿಸಿವೆ. ಅಂದಿನ ಅನುಭವ ಮಂಟಪದ ಮಾದರಿಯಲ್ಲಿಯೇ ಪಾರ್ಲಿಮೆಂಟ್, ವಿಧಾನಮಂಡಲ ರಚನೆಯಾಗಿವೆ ಎಂದು ಹೇಳಿದರು.

ದೇಶದಲ್ಲಿ ಮೊಟ್ಟಮೊದಲ ಬಾರಿ ಬಸವ ಜಯಂತಿಯನ್ನು ಆರಂಭಿಸಿದ ಕೀರ್ತಿ ದಾವಣಗೆರೆಗೆ ಸೇರಿದ್ದು, ಬಸವ ತತ್ವಗಳು ಅಮರವಾಗಿವೆ. ಮನುಷ್ಯ ಕುಲಂ ಒಂದೇ, ಗಂಡು-ಹೆಣ್ಣು ಎರಡೇ ಜಾತಿಗಳಿವೆ ಎಂಬುದನ್ನು ಬಸವಣ್ಣ ಪ್ರತಿಪಾದಿಸಿದ್ದಾರೆ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನಿ ಶಿವಕುಮಾರ್ ಮಾತನಾಡಿ, ದಾವಣಗೆರೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಸಮ್ಮೇಳನ ಆಯೋಜನೆ ಮಾಡುವ ಚಿಂತನೆ ನಡೆಸಲಾಗಿದ್ದು, ಇದಕ್ಕೆ ರಾಷ್ಟ್ರೀಯ ಅಧ್ಯಕ್ಷರು ಅನುಮತಿಸಬೇಕು ಎಂದು ಮನವಿ ಮಾಡಿದರು. ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಶುಭ ಐನಳ್ಳಿ ಬಸವ ಜಯಂತಿ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ವೀರಶೈವ ಮಹಾಸಭಾ ಪದಾಧಿಕಾರಿಗಳಾದ ಐಗೂರು ಚಂದ್ರಶೇಖರ್, ಕರೇಶಿವಪ್ಪ ಸಿದ್ದೇಶ್, ಶಂಭು ಉರೇಕೊಂಡಿ, ಸಂದೀಪ ಅಣಬೇರು, ಪುಷ್ಪಾ ವಾಲಿ, ಜಯಪ್ರಕಾಶ್ ಮಾಗಿ, ನವೀನ್, ಕೊರಟಿಕೆರೆ ಶಿವಕುಮಾರ್, ಕೆ.ಎಸ್.ಬಸವಂತಪ್ಪ, ಬಿ.ಎಸ್. ರಮೇಶ್, ಮಹಾಂತೇಶ್ ಒಣರೊಟ್ಟಿ, ಕುರುಡಿ ಗಿರೀಶ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಸೌಮ್ಯ ಪ್ರಕಾಶ್ ಮತ್ತು ಸಂಗಡಿಗರು ವಚನ ಗಾಯನ ನಡೆಸಿಕೊಟ್ಟರು. ಬಸವ ಜಯಂತಿ ಅಂಗವಾಗಿ ಏರ್ಪಡಿಸಿದ್ದ ವಚನ ಗಾಯನ ಹಾಗೂ ವೇಷಭೂಷಣ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಇದೇ ವೇಳೆ ಯುವ ಘಟಕದ ರಾಷ್ಟ್ರೀಯ ಉಪಾಧ್ಯಕ್ಷ ಅಣಬೇರು ಸಂದೀಪ್ ಅವರಿಗೆ 'ಮಹಾ ಸಂಘಟನಾ ಚತುರ' ಬಿರುದು ನೀಡಿ ಗೌರವಿಸ ಲಾಯಿತು. ಜ್ಞಾನಿಕಾ ಐನಳ್ಳಿ ನಿರೂಪಿಸಿದರು.

# 2,500 ಕೋಟಿ ರೂ. ಕೊಟ್ಟರೆ ಮುಖ್ಯಮಂತ್ರಿ ಸ್ಥಾನ : ಶಾಸಕ ಯತ್ನಾಳ್ ಹೊಸ ಬಾಂಬ್



ಬೆಳಗಾವಿ, ಮೇ 6 - 2500 ಕೋಟಿ ರೂಪಾಯಿ ಕೊಡಿ ನಿಮ್ಮನ್ನು ಮುಖ್ಯಮಂತ್ರಿ ಮಾಡುತ್ತೇವೆ ಎಂದು ಕೆಲವರು ತಮ್ಮ ಬಳಿ ಬಂದಿದ್ದರು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೊಸ ಬಾಂಬ್ ಸಿಡಿಸಿದ್ದಾರೆ.

ದೆಹಲಿಯಿಂದ ಬಂದವರು 2,500 ಕೋಟಿ ರೂ. ಕೊಡಿ ನಿಮ್ಮನ್ನು ಸಿಎಂ ಮಾಡ್ತೀವಿ ಅಂದಿದ್ದರು. ಜೆ. ಪಿ.ನಡ್ಡಾರನ್ನು ಭೇಟಿ ಮಾಡಿಸುತ್ತೇವೆ ಅಂತ ನನ್ನ ಬಳಿ ಬಂದಿದ್ದರು. ಆದರೆ ನಾನು, 2,500 ಕೋಟಿ ರೂ. ಅಂದರೆ ಏನು ಅಂತಾ ತಿಳಿದಿರಿ? ಆ ಹಣ ಹೇಗೆ ಇಡೋದು? ಏನು ಕೋಣೆಯಲ್ಲಿ ಇಡೋದಾ ಅಥವಾ ಗೋದಾಮಿನಲ್ಲಿ ಇಡೋದಾ? ಎಂದು ಪ್ರಶ್ನಿಸಿದೆ ಎಂದರು.

ಸಮಾರಂಭವೊಂದರಲ್ಲಿ ಮಾತನಾಡುತ್ತಿದ್ದ ಅವರು, ಟಿಕೆಟ್ ಕೊಡ್ತೀನಿ ಅಂತಾ ರಾಜಕಾರಣದಲ್ಲಿ ಎಲ್ಲಾ ಕಡೆ ಮೋಸ ಮಾಡುತ್ತಾರೆ. ನಾನು ವಾಜಪೇಯಿಯವರ ಕೈಯ್ಯಲ್ಲಿ ಕೆಲಸ ಮಾಡಿದವನು. ಅದ್ವಾನಿ, ರಾಜನಾಥ ಸಿಂಗ್, ಅರುಣ್ ಜೇಟ್ಲಿ ಅವರ ಜೊತೆ ಕೆಲಸ ಮಾಡಿದ್ದೇನೆ ಎಂದು ನೆನಪಿಸಿಕೊಂಡರು. ಆದರೆ, ಹಣಕ್ಕಾಗಿ ಮುಖ್ಯಮಂತ್ರಿ ಸ್ಥಾನ ಕೊಡುತ್ತೇನೆ ಎಂದವರು ಯಾರು ಎಂಬುದನ್ನು ಯತ್ನಾಳ್ ಬಹಿರಂಗ ಪಡಿಸಿಲ್ಲ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್, ಹೇಳಿಕೆಯ ಬಗ್ಗೆ ಪ್ರಕರಣ ದಾಖಲಿಸಿ ಗಂಭೀರ ತನಿಖೆಯಾಗಬೇಕು. ಈ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲೂ ಚರ್ಚೆಯಾಗಬೇಕು ಎಂದಿದ್ದಾರೆ.

## ಇಂದು ಹಣಕಾಸು ವ್ಯವಹಾರ ರಹಿತ ದಿನ

ದಾವಣಗೆರೆ, ಮೇ 6- ನೂತನ ದಾವಣಗೆರೆ ಅಂಚೆ ವಿಭಾಗವು ಅಧಿಕೃತವಾಗಿ ಮೇ 1 ರಂದು ಆರಂಭವಾಗಿದ್ದು, ಅಂಚೆ ವಿಭಾಗದಲ್ಲಿ ಬರುವ ಎಲ್ಲಾ ಅಂಚೆ ಕಚೇರಿ ಮತ್ತು ಶಾಖಾ ಅಂಚೆ ಕಚೇರಿಗಳಿಗೆ ಹೊಸ ಪ್ರಾಫಿಟ್ ಸೆಂಟರ್ಸ್ ಸಂಖ್ಯೆ ನೀಡುವ ಅಂತರ್ಜಾಲ ಪ್ರಕ್ರಿಯೆ ನಾಳೆ ದಿನಾಂಕ 7 ಮತ್ತು 8ರಂದು ಪ್ರಗತಿಯಲ್ಲಿರುವುದರಿಂದ, ನಾಳೆ ದಿನಾಂಕ 7 ರಂದು 'ಹಣಕಾಸು ವ್ಯವಹಾರ ರಹಿತ ದಿನ'ವೆಂದು ಪರಿಗಣಿಸಲಾಗಿದೆ. ಆದ್ದರಿಂದ ಗೌರವಾನ್ವಿತ ಅಂಚೆ ಗ್ರಾಹಕರು ಹಾಗೂ ನಾಗರಿಕರು ಸಹಕರಿಸಬೇಕೆಂದು ದಾವಣಗೆರೆ ವಿಭಾಗದ ಅಂಚೆ ಅಧೀಕ್ಷಕ ಓ.ವಿರೂಪಾಕ್ಷಪ್ಪ ತಿಳಿಸಿದ್ದಾರೆ.

## ನಗರಲ್ಲಿ ಇಂದು ಬೀಡಿ ಕಾರ್ಮಿಕರ, ನಾಳೆ ಆಟೋ ಚಾಲಕರ ಆರೋಗ್ಯ ಶಿಬಿರ

ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಇಂದು ಬೀಡಿ ಕಾರ್ಮಿಕರು ಮತ್ತು ನಾಳೆ ಆಟೋ ಚಾಲಕರುಗಳಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಲಿದೆ. ಕೆ.ಆರ್. ರಸ್ತೆಯಲ್ಲಿರುವ ಎಸ್.ಎಸ್. ಸಾರ್ವಜನಿಕ ಆಸ್ಪತ್ರೆಯಲ್ಲಿ ಬೆಳಿಗ್ಗೆ 10 ರಿಂದ 2 ರವರೆಗೆ ಶಿಬಿರ ನಡೆಯಲಿದೆ ಎಂದು ಬಾಪೂಜಿ ವಿದ್ಯಾಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

## ನಗರದ ಬಿಐಇಟಿಯಲ್ಲಿ ಇಂದು 39ನೇ ಪದವಿ ಪ್ರದಾನ

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 39 ನೇ ಪದವಿ ಪ್ರದಾನ ಸಮಾರಂಭವನ್ನು ಇಂದು ಬೆಳಿಗ್ಗೆ 10.30 ಕ್ಕೆ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಭವನದಲ್ಲಿ ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಧಾರವಾಡ ಐಐಟಿಯ ನಿರ್ದೇಶಕರಾದ ಪ್ರೊ. ಪಿ. ಸೇಶು ಹಾಗೂ ಕುಲಸಚಿವರಾದ ಡಾ. ಎಸ್. ಬಸವರಾಜಪ್ಪ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಬಾಪೂಜಿ ವಿದ್ಯಾಸಂಸ್ಥೆಯ ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ್ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಪೂಜಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ ವಹಿಸಿಕೊಳ್ಳಲಿದ್ದಾರೆ.

ಸಮಾರಂಭದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ ಮತ್ತು ನಿರ್ದೇಶಕರಾದ ಪ್ರೊ. ವೈ. ವೃಷಭೇಂದ್ರಪ್ಪ ಹಾಗೂ ಕಾಲೇಜಿನ ಎಲ್ಲಾ ಸಿಬ್ಬಂದಿ ಉಪಸ್ಥಿತರಿರುವರು.

ಕಾರ್ಯಕ್ರಮದಲ್ಲಿ ಸುಮಾರು 650 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪದವಿ ಪ್ರಮಾಣ ಪತ್ರವನ್ನು ಸ್ವೀಕರಿಸಲಿದ್ದು, ವಿಶ್ವವಿದ್ಯಾಲಯ ರ್‍ಯಾಂಕ್ ವಿಜೇತರು ಹಾಗೂ ವಿವಿಧ ವಿಭಾಗಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ಮತ್ತು ಚಿನ್ನದ ಪದಕ ವಿಜೇತರಿಗೆ ಇದೇ ವೇಳೆ ಸನ್ಮಾನಿಸಲಾಗುವುದು ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

<u>ಸರಸ್ವತಿ ನಗರ ಶಾಖೆ-1:</u> (ಸಮಯ ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ರವರೆಗೆ) ಸರಸ್ವತಿ ನಗರ ಸಿ ಬ್ಲಾಕ್, ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

<u>ಕೆ.ಟಿ.ಜೆ ನಗರ ಶಾಖೆ-2 :</u> (ಸಮಯ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ) ಡಿ.ಸಿ.ಎಂ ಟೌನ್‌ಶಿಪ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

<u>ಆಂಜನೇಯ ಬಡಾವಣೆ ಶಾಖೆ-3:</u> (ಸಮಯ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ) ಆಂಜನೇಯ ಬಡಾವಣೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. <u>ಆಂಜನೇಯ ಬಡಾವಣೆ ಶಾಖೆ-4 :</u> (ಸಮಯ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ) ಕುವೆಂಪು ನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. <u>ಪಿ.ಜೆ ಬಡಾವಣೆ ಶಾಖೆ-5 :</u> (ಸಮಯ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ) ಸಾಯಿಬಾಬಾ ದೇವಸ್ಥಾನ, ಎಂ.ಸಿ.ಸಿ ಎ ಬ್ಲಾಕ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. <u>ಪಿ.ಜೆ ಬಡಾವಣೆ ಶಾಖೆ-6 :</u> (ಸಮಯ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ) ಬಾಲಾಜಿ ನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

## ಉಜ್ಜಯಿನಿಯಲ್ಲಿ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ವೈಭವದ ಮಹಾರಥೋತ್ಸವ

ಕೊಟ್ಟೂರು, ಮೇ 6- ಪಂಚಪೀಠಗಳಲ್ಲೊಂದಾದ ಶ್ರೀ ಸದ್ಧರ್ಮ ಪೀಠವಿರುವ ಕೊಟ್ಟೂರು ಸಮೀಪದ ಉಜ್ಜಯಿನಿಯಲ್ಲಿ ಶುಕ್ರವಾರ ಸಂಜೆ ಲಕ್ಷಾಂತರ ಭಕ್ತ ಸಮೂಹದ ನಡುವೆ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ಮಹಾರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಕೋವಿಡ್ ಕಾರಣದಿಂದಾಗಿ ಕಳೆದ ಮೂರು ವರ್ಷಗಳಿಂದ ಶ್ರೀ ಮರುಳಸಿದ್ಧೇಶ್ವರ ರಥೋತ್ಸವ ರದ್ದಾಗಿತ್ತು. ಆದರೆ ಈ ಬಾರಿ ಯಾವುದೇ ಅಡೆತಡೆಗಳಿಲ್ಲದೇ ರಥೋತ್ಸವ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಮಹಾಸ್ವಾಮಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಶ್ರೀ ಸ್ವಾಮಿಯ ಉತ್ಸವ ಮೂರ್ತಿಯನ್ನು ಸಕಲ ವಾದ್ಯಮೇಳಗಳೊಂದಿಗೆ ಅಲಂಕರಿಸಿದ ಪಲ್ಲಕ್ಕಿಯಲ್ಲಿ ದೇವಸ್ಥಾನದಿಂದ ರಥದ ಬಳಿ ತಂದು ಮೂರು ಸುತ್ತು ಪ್ರದಕ್ಷಿಣೆ ಹಾಕಿ ಧಾರ್ಮಿಕ ವಿಧಾನಗಳನ್ನು ನೆರವೇರಿಸಲಾಯಿತು.

ದೇವಸ್ಥಾನ ಬಳಗದವರು ಮೂರ್ತಿಯೊಂದಿಗೆ ರಥ ಏರಿದ ನಂತರ ಭಕ್ತರು ಜಯಘೋಷ ಹಾಕುತ್ತಾ ರಥ ಎಳೆದು ಭಕ್ತಿ ಸಮರ್ಪಿಸಿದರು. ಪಾದಗಟ್ಟೆವರೆಗೆ ಸಾಗಿದ ರಥ ಮತ್ತೆ ಅದೇ ಮಾರ್ಗದ ಮೂಲಕ ತೇರು ಬಯಲಿಗೆ ಬಂದು ನಿಂತಿತು.

ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಮಹಾಸ್ವಾಮಿಗಳು ಕಲ್ಲಿನ ಮಂಟಪದಲ್ಲಿ ಆಸೀನರಾಗಿ ಭಕ್ತರನ್ನು ಆಶೀರ್ವದಿಸಿದರು. ವಿಜಯನಗರ ಜಿಲ್ಲೆಯ ಉಸ್ತುವಾರಿ ಸಚಿವ ಆನಂದಸಿಂಗ್ ರಥೋತ್ಸವದಲ್ಲಿ ಭಾಗವಹಿಸಿದ್ದರು.

**ನಾಳೆ ತೈಲಾಭಿಷೇಕ:** ನಾಳೆ ದಿನಾಂಕ 7 ರಂದು ಶನಿವಾರ ಸಂಜೆ 4 ಗಂಟೆಗೆ ನಾಡಿನ ಧಾರ್ಮಿಕ ಪರಂಪರೆಯಲ್ಲಿ ವಿಶಿಷ್ಟವಾಗಿರುವ ವಿಶ್ವ ವಿಖ್ಯಾತ ಶಿಖರಕ್ಕೆ ತೈಲಾಭಿಷೇಕ ಕಾರ್ಯಕ್ರಮ ಜರುಗಲಿದೆ.

## ನಗರದಲ್ಲಿ ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಎಸ್.ಎಸ್. ಲೇಔಟ್ ಎ ಬ್ಲಾಕ್ ಮತ್ತು ಬಿ ಬ್ಲಾಕ್ ಬಸವೇಶ್ವರ ಬಡಾವಣೆ, ಶಾಂತಿನಗರ, ಮಹಾಲಕ್ಷ್ಮಿ ಲೇಔಟ್, ಬಾಲಾಜಿ ನಗರ, ನಿಜಲಿಂಗಪ್ಪ ಲೇಔಟ್, ನೌಕರರ ಸಮುದಾಯ ಭವನ, ಅಥಣಿ ಕಾಲೇಜ್, ಎಮ್‌ಬಿಎ ಕಾಲೇಜ್, ಆಫೀಸರ್ಸ್ ಕ್ಲಬ್, ಕುಂದವಾಡ ಕೆರೆ ನೀರು ಸರಬರಾಜು ಘಟಕ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ನಗರಕ್ಕೆ ಇಂದು ಗೋಸಾಯಿ ಮಠದ ಸ್ವಾಮೀಜಿ



ಬೆಂಗಳೂರಿನ ಭವಾನಿದತ್ತ ಪೀಠದ ಗೋಸಾಯಿ ಮಹಾಸಂಸ್ಥಾನ ಮಠದ ಶ್ರೀ ಮಂಜುನಾಥ ಭಾರತಿ ಸ್ವಾಮೀಜಿಯವರನ್ನು ಅಭಿನಂದಿಸುವ ಸಮಾರಂಭವು ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಕೃಷ್ಣ ಭವಾನಿ ಕಲ್ಯಾಣ ಮಂಟಪದಲ್ಲಿ ಇಂದು ನಡೆಯಲಿದೆ ಎಂದು ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷರೂ ಆಗಿರುವ ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದ್ದಾರೆ.

ಜಿಲ್ಲಾ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದಿಂದ ಈ ಸಮಾ ರಂಭವನ್ನು ಆಯೋಜಿಸಲಾಗಿದೆ. ಇಂದು ಬೆಳಿಗ್ಗೆ 9 ಗಂಟೆಗೆ ಶ್ರೀಗಳನ್ನು ದುರ್ಗಾಂ ಬಿಕಾ ದೇವಸ್ಥಾನದಿಂದ ಅದ್ಧೂರಿ ಮೆರ ವಣಿಗೆಯಲ್ಲಿ ಶ್ರೀ ಕೃಷ್ಣ ಭವಾನಿ ಕಲ್ಯಾಣ ಮಂಟಪಕ್ಕೆ ಕರೆ ತರಲಾಗುವುದು. ನಂತರ ಬೆಳಿಗ್ಗೆ 11 ಕ್ಕೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಅವರು ಹೇಳಿದರು.

ಸಮಾರಂಭದಲ್ಲಿ ಮರಾಠ ಸಮುದಾಯಕ್ಕೆ ಸೇರಿದ ಹಾನಗಲ್ ಶಾಸಕ ಶ್ರೀನಿವಾಸ ಮಾನೆ, ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಜಿ. ಮುಳೆ, ಪಾಲಿಕೆ ಉಪ ಮೇಯರ್ ಗಾಯತ್ರಿಬಾಯಿ ಖಂಡೋಜಿರಾವ್ ಜಾಧವ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎ.ವೈ. ರಾಕೇಶ್ ಜಾಧವ್, ಪಾಲಿಕೆ ನಾಮ ನಿರ್ದೇಶಿತ ಸದಸ್ಯ ಹೆಚ್.ಎಸ್. ಗಣೇಶ್‌ರಾವ್ ಪವಾರ್, ದೂಡಾ ಸದಸ್ಯ ಟಿ. ಮಾರುತಿರಾವ್ ಘಾಟ್ಗೆ, ದಿಶಾ ಸದಸ್ಯೆ ಭಾಗ್ಯ ಪಿಸಾಳೆ, ಗಣೇಶ ಯುವ ರಿಫೈನರಿ ಮಂಡಳಿ ಅಧ್ಯಕ್ಷ ದಗಡೋಜಿರಾವ್ ಸಾಳಂಕಿ, ಮಂಡಳಿಯ ಖಜಾಂಚಿ ವಿಕಾಸ್ ದೇವಕರ್ ಅವರುಗಳನ್ನು ಸನ್ಮಾನಿಸಲಾಗುವುದು. ಸಮಾರಂಭದ ಅಧ್ಯಕ್ಷತೆಯನ್ನು ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ. ಮಾಲತೇಶ್ ರಾವ್ ಜಾಧವ್ ವಹಿಸಲಿದ್ದಾರೆ.

## ವಾಸವಿ ಅಮ್ಮನವರಿಗೆ ಪಂಚರಂಗಿ ಅಲಂಕಾರ



ದಾವಣಗೆರೆ, ಮೇ 6 - ನಗರದ ಎಸ್‌ಕೆಪಿ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ವಾಸವಿ ಜಯಂತಿ ಪ್ರಯುಕ್ತ ಶ್ರೀ ಅಮ್ಮನವರಿಗೆ ಇಂದು ಪಂಚರಂಗಿ ಅಲಂಕಾರ ಮಾಡಲಾಗಿತ್ತು. ವಾಸವಿ ಮಹಿಳಾ ಸಂಘ ಮತ್ತು ವಾಸವಿ ಯುವತಿಯರ ಸಂಘಗಳ ಕನ್ನಿಕೆಯರ ಪೂಜಾ ಕಾರ್ಯಕ್ರಮದ ನಂತರ ಪ್ರಾಕಾರೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ.

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಯುವಕ /ಯುವತಿಯರು ಬೇಕಾಗಿದ್ದಾರೆ.
Mediworld Pharma
C/o AKP Healthcare Pvt. Ltd
Hadadi Rd, opp. Taralabalu school,
Shrinivaasa Nagara, Davanagere, Karnataka 577005
Mob: 93531 57441

ಆಸ್ಪತ್ರೆಯಲ್ಲಿ ವೈದ್ಯರು ಲಭ್ಯ
ಡಾ|| ಜೆ.ಸಿ. ಬಸವರಾಜ್, ಕೀಲು-ಮೂಳೆ ತಜ್ಞರು
ಭೇಟಿ ಸಮಯ : ಸೋಮವಾರದಿಂದ ಶನಿವಾರದವರೆಗೆ
ಪ್ರತಿದಿನ ಮಧ್ಯಾಹ್ನ 1.00 ರಿಂದ 3.00 ರವರೆಗೆ
ಸಂಜೆ 6.30 ರಿಂದ ರಾತ್ರಿ 8.30 ರವರೆಗೆ.
ಭಾನುವಾರ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00ರವರೆಗೆ
ಶಿಲ್ಪ ಡಯಾಗ್ನೋಸ್ಟಿಕ್ಸ್ ಅಂಡ್ ಪ್ರೈ. ಲಿಮಿಟೆಡ್
ಸ್ವಿಮ್ಮಿಂಗ್ ಪೂಲ್ ಹತ್ತಿರ, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ.
ಫೋ : 95353 53872

WANTED
Sales executives - 3 No's
Experienced in any marketing field.
Salary + Incentive
Contact:
Samyak Ply and Hardware
Hadadi Road, Davangere -577005
Mob - 70193 04501

# ನಗರದಲ್ಲಿ ಶಂಕರಾಚಾರ್ಯರ ಜಯಂತಿ, ಮೆರವಣಿಗೆ



ದಾವಣಗೆರೆ, ಮೇ 6- ಶ್ರೀ ಶಂಕರಾಚಾರ್ಯ ಜಯಂತಿ ಅಂಗವಾಗಿ ನಗರದ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಂಕರ ಮಠದ ಆವರಣದಲ್ಲಿ ಇಂದು ಬೆಳಿಗ್ಗೆ ಪಲ್ಲಕ್ಕಿಯಲ್ಲಿ ಆಚಾರ್ಯರ ಭಾವಚಿತ್ರವನ್ನಿಟ್ಟು ಮೆರವಣಿಗೆ ಮಾಡಲಾಯಿತು.

ಅರ್ಚಕ ಪವನ್ ಕುಮಾರ್ ಭಟ್, ಪ್ರಸನ್ನ, ದಿಲೀಪ್, ಅಶೋಕ ದೀಕ್ಷಿತ್. ಮಾಲತೇಶ್ ನಾಡಿಗೇರ್. ಅಜಯ್ ಭಟ್, ಗಣೇಶ್ ಭಟ್, ಎಂ.ಜಿ. ಶ್ರೀಕಾಂತ್, ಗಿರೀಶ್ ಕುಲಕರ್ಣಿ, ರಾಧಿಕಾ, ಎನ್.ಜಿ. ಶ್ರೀಪಾದರಾವ್ ಉಪಸ್ಥಿತರಿದ್ದರು. ಭಕ್ತಾದಿಗಳು ಶ್ರೀ ಶಂಕರಾಚಾರ್ಯರು ರಚಿಸಿದ ಸ್ತೋತ್ರ ಪಠಣ ಮಾಡಿದರು.

# ಸದ್ಗುರು ಸಮರ್ಥ ಕಲ್ಮೇಶ್ವರ ಮಹಾರಾಜರ ವಾರ್ಷಿಕ ಪುಣ್ಯತಿಥಿ



**ನಗರದಲ್ಲಿ ಇಂದಿನಿಂದ**

ಶ್ರೀ ಸ.ಸ. ಗಿರಿಮಲ್ಲೇಶ್ವರ ಮಹಾರಾಜರ 53ನೇ ವಾರ್ಷಿಕ ಪುಣ್ಯತಿಥಿಯು ದೊಡ್ಡಪೇಟೆಯಲ್ಲಿರುವ ಶ್ರೀ ಸ.ಸ. ಕಲ್ಮೇಶ್ವರ ಮಹರಾಜರ ಆಶ್ರಮದಲ್ಲಿ ಇಂದಿನಿಂದ ಮೂರು ದಿನ ನಡೆಯಲಿದೆ.

**ಜ್ಞಾನಯಜ್ಞ :** ಇಂದು ಬೆಳಿಗ್ಗೆ 10ರಿಂದ ಶ್ರೀ ಉಭಯ ಸದ್ಗುರುಗಳವರ ಶಿಲಾಮೂರ್ತಿಗಳಿಗೆ ಅಭಿಷೇಕ, ಪೂಜಾ, ದಾಸಬೋಧ ಹಾಗೂ ವೀಣಾ ಸ್ಥಾಪನಾ, ಪುರಾಣ ಪ್ರವಚನ, ಭಜನೆ ನಡೆಯುವುದು.

ನಾಳೆ ಭಾನುವಾರ ಬೆಳಿಗ್ಗೆ 10 ರಿಂದ ಉಭಯ ಶ್ರೀಗಳವರ ಶಿಲಾಮೂರ್ತಿಗಳಿಗೆ ಪೂಜೆ, ದಾಸಬೋಧ ಹಾಗೂ ವೀಣಾ ಪೂಜಾ ಪುರಾಣ ಪ್ರವಚನ, ಭಜನೆ ನಂತರ ಪ್ರಸಾದ ವಿನಿಯೋಗ ನಡೆಯುವುದು. ಸಂಜೆ 6 ರಿಂದ ಪಲ್ಲಕ್ಕಿ ಉತ್ಸವ ಹಾಗೂ ರಾತ್ರಿ ಜಾಗರಣೆ ನಡೆಯುವುದು. ನಾಡಿದ್ದು ದಿನಾಂಕ 9 ರ ಸೋಮವಾರ ಬೆಳಿಗ್ಗೆ 10 ರಿಂದ ಉಭಯ ಸದ್ಗುರುಗಳ ಶಿಲಾಮೂರ್ತಿಗಳಿಗೆ ಪೂಜೆ, ದಾಸಬೋಧ ಹಾಗೂ ವೀಣಾ ಪೂಜಾ ಪ್ರವಚನ ನಡೆಯುವುದು. ಮಧ್ಯಾಹ್ನ 1.30 ಗಂಟೆಗೆ ಶ್ರೀ ಸದ್ಗುರುಗಳವರ ಪಾದಾರವಿಂದಗಳಿಗೆ ಪುಷ್ಪಾರ್ಚನೆ, ಭಜನೆ ನಂತರ ಅನ್ನ ಸಂತರ್ಪಣೆ ನಡೆದು, ಜ್ಞಾನಯಜ್ಞಕ್ಕೆ ತೆರೆ ಬೀಳುವುದು.

ಈ ಎಲ್ಲಾ ಕಾರ್ಯಕ್ರಮಗಳು ಶ್ರೀ ಸ.ಸ. ಪ್ರಭುದೇವ ಮಹಾರಾಜರ (ಹಿಪ್ಪರಗಿ) ಸನ್ನಿಧಿಯಲ್ಲಿ ಏರ್ಪಾಡಾಗಿವೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಂ.ಬಿ.ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಇತರೆ ಪ್ರದೇಶಗಳು, ಹಗೇದಿಬ್ಬ ಸರ್ಕಲ್, ಗಾಂಧಿನಗರ ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನ, ಕೆ.ಆರ್. ಮಾರ್ಕೆಟ್, ಹೆರಿಗೆ ಆಸ್ಪತ್ರೆ, ಚಾಮರಾಜಪೇಟೆ ಹಾಗೂ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಬಸವನಾಳು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಲಿಂಗದಹಳ್ಳಿ ಕುಬೇರಪ್ಪ



ದಾವಣಗೆರೆ, ಮೇ 6- ತಾಲ್ಲೂಕಿನ ಬಸವನಾಳು ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಇಂದು ನಡೆದ ಚುನಾವಣೆಯಲ್ಲಿ ಲಿಂಗದಹಳ್ಳಿ ಕುಬೇರಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಬಿ. ರವೀಂದ್ರನಾಯ್ಕ ತಿಳಿಸಿದ್ದಾರೆ.


ಈ ಸಂದರ್ಭದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿ. ರಾಘವೇಂದ್ರನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

# ಜಾನಪದ ಗಾಯಕ ಉಮೇಶ್ ನಾಯ್ಕ್ ಅವರಿಗೆ ಪ್ರಶಸ್ತಿ



ಹರಿಹರ, ಮೇ 6 - ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ಇದೇ ದಿನಾಂಕ 9 ರಂದು ದೀಕ್ಷಾ ಕಾರ್ಯಕ್ರಮ ನಡೆಯಲಿದ್ದು, ಸಮಾರಂಭದಲ್ಲಿ ಜಾನಪದ ಸಾಹಿತ್ಯದಲ್ಲಿ ಸಲ್ಲಿಸುತ್ತಿರುವ ಸೇವೆಗಾಗಿ ದಾವಣಗೆರೆ ತಾಲ್ಲೂಕಿನ ಜಾನಪದ ಗಾಯಕ ಸಿ.ಎಚ್. ಉಮೇಶ್ ನಾಯ್ಕ್ ಅವರಿಗೆ ಶರಣ ಸಾಹಿತ್ಯ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತದೆ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte